ಕರ್ನಾಟಕ ವಿಧಾನ ಸಭೆ

(ಹದಿಮೂರನೇ ವಿಧಾನಸಭೆ–4ನೇ ಅಧಿವೇಶನ)
ಮಂಗಳವಾರ 29ನೇ ಡಿಸೆಂಬರ್ 2009ರಂದು ಸದನವು
ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ 11 ಗಂಟೆ 12 ನಿಮಿಷಕ್ಕೆ ಸಮಾವೇಶಗೊಂಡಿತು.
ಅಧ್ಯಕ್ಷರು ಶ್ರೀ ಕೆ.ಜಿ. ಬೋಪಯ್ಯರವರು ಪೀಠವನ್ನು ಅಲಂಕರಿಸಿದ್ದರು.

(11-00 AM)

ಸದನದ ಕಲಾಪವು ಬೆಳಿಗ್ಗೆ 11 ಗಂಟೆ 12 ನಿಮಿಷಕ್ಕೆ ಪ್ರಾರಂಭವಾಯಿತು.
(ಸನ್ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಿದ್ದರು)

1. ಸಂತಾಪ ಸೂಚನೆ :

ವಿಷಯ : **ವಿಧಾನಸಭೆಯ ಮಾಜಿ ಸದಸ್ಯ ಶ್ರೀ ಎನ್.ಎಸ್. ಗುರುಸಿದ್ದಪ್ಪ ಹಾಗೂ ವಿಧಾನ ಪರಿಷತ್ತಿನ ಹಾಲಿ ಸದಸ್ಯರಾಗಿದ್ದ ಶ್ರೀ ಎಸ್. ಕೈಲಾಸ ಅವರುಗಳ ನಿಧನದ ಬಗ್ಗೆ.**

ಅಧ್ಯಕ್ಷರು : ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಎನ್.ಎಸ್. ಗುರುಸಿದ್ದಪ್ಪ ಹಾಗೂ ವಿಧಾನ ಪರಿಷತ್ತಿನ ಹಾಲಿ ಸದಸ್ಯರಾಗಿದ್ದ ಶ್ರೀ ಎಸ್.ಕೈಲಾಸ್ ಅವರುಗಳು ನಿಧನರಾಗಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸಬಯಸುತ್ತೇನೆ.

ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಎನ್.ಎಸ್.ಗುರುಸಿದ್ದಪ್ಪ ರವರು 1934ನೇ ಫೆಬ್ರವರಿ 13 ರಂದು ಜನಿಸಿದ್ದು, ವೃತ್ತಿಯಲ್ಲಿ ವಕೀಲರು ಹಾಗೂ ಕೃಷಿಕರಾಗಿರುತ್ತಾರೆ. ಶ್ರೀಯುತರು ಸಹಕಾರ ಕ್ಷೇತ್ರದಲ್ಲಿ ಹಾಗೂ ಹಳ್ಳಿಗಳ ಅಭಿವೃದ್ಧಿಗಾಗಿ ಶ್ರಮಿಸಿ ಕೃಷಿ ಕ್ಷೇತ್ರದಲ್ಲಿ ತಾಂತ್ರಿಕತೆಯನ್ನು ಅಳವಡಿಸಲು ಪ್ರಯತ್ನಿಸಿರುತ್ತಾರೆ. ದಿವಂಗತರು ನಂಜನಗೂಡು ವಿಧಾನ ಸಭಾ ಕ್ಷೇತ್ರದಿಂದ ಐದನೇ ವಿಧಾನಸಭೆಗೆ ಚುನಾಯಿತರಾಗಿ ಸೇವೆ ಸಲ್ಲಿಸಿರುತ್ತಾರೆ.

ಶ್ರೀಯುತರು ದಿನಾಂಕ: 27.12.2009ರಂದು ನಿಧನ ಹೊಂದಿದರು.

ಹಾಲಿ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಸ್.ಕೈಲಾಸ್‌ರವರು ಇಂದು ಮುಂಜಾನೆ ದೈವಾಧೀನರಾದರೆಂದು ಸದನಕ್ಕೆ ತಿಳಿಸಲು ವಿಷಾದಿಸುತ್ತೇನೆ. ಶ್ರೀಯುತರು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸಕ್ರಿಯ ಸದಸ್ಯರಾಗಿದ್ದರು. ಇವರು ದಿವಂಗತ ದೀನದಯಾಳ್ ಉಪಧ್ಯಾಯ ಹಾಗೂ ಗುರೂಜಿಯವರ ವಿಚಾರಧಾರೆಗೆ ಮನಸೋತು ಜನಸಂಘದ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡವರು. ದಿವಂಗತ ಜಯಪ್ರಕಾಶ್ ನಾರಾಯಣ್ ರವರ ನೇತೃತ್ವದ ಜನಪರ ಹೋರಾಟಗಳಲ್ಲಿ ಹಾಗೂ ಜನಸಂಘಟನೆಯಲ್ಲಿ ಸದಾ ಮುಂಚೂಣಿಯಲ್ಲಿರುತ್ತಿದ್ದರು.

1975ರ ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಶ್ರೀ ಎಲ್.ಕೆ.ಅಡ್ವಾಣಿ ಅವರ ಜೊತೆ ಬೆಂಗಳೂರಿನ ಸೆರೆಮನೆ ವಾಸವನ್ನು ಅನುಭವಿಸಿದ್ದರು. ರಾಷ್ಟ್ರಮಟ್ಟದ ಹೋರಾಟ ಕಾರ್ಯಕ್ರಮಗಳ ಪೈಕಿ ಕಾಶ್ಮೀರ ಚಲೋ ಕಾರ್ಯಕ್ರಮದ ಅಂಗವಾಗಿ ಜಮ್ಮು ಗಡಿ ಪ್ರದೇಶದ ಲಾಲ್ ಚೌಕ್‌ನಲ್ಲಿ ರಾಷ್ಟ್ರಧ್ವಜ ಹಾರಿಸಲು ಹೊರಟಾಗ ದೋಡಾದಲ್ಲಿ ಬಂಧಿತರಾಗಿದ್ದರು.

ಕಳೆದ 41 ವರ್ಷಗಳಿಂದ ರಾಜಕೀಯ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದು, ರಾಜ್ಯಮಟ್ಟದ ಪದಾಧಿಕಾರಿಯಾಗಿ ಹಾಗೂ ಭಾರತೀಯ ಜನತಾ ಪಕ್ಷದ ರಾಜ್ಯ ಕಾರ್ಯದರ್ಶಿಯಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ. ಕಾರ್ಮಿಕ ಮುಖಂಡರಾಗಿ ಕಾರ್ಮಿಕರ ಹಿತಾಸಕ್ತಿಯನ್ನು ಕಾಪಾಡಲು ಅವಿರತವಾಗಿ ಶ್ರಮಿಸಿರುತ್ತಾರೆ. ಶ್ರೀಯುತರು ದಿನಾಂಕ: 3.12.2008ರಿಂದ ವಿಧಾನ ಪರಿಷತ್ತಿನ ಸದಸ್ಯರಾಗಿ ಸೇವೆಯನ್ನು ಸಲ್ಲಿರುತ್ತಾರೆ. ಇವರ ನಿಧನದಿಂದಾಗಿ ಸರಳ, ಸಜ್ಜನ ಹಾಗೂ ಉತ್ತಮ ಸಂಘಟನೆಕಾರರನ್ನು ಕಳೆದುಕೊಂಡಂತಾಗಿದೆ. ಈ ಸದನವು ಅಂಗೀಕರಿಸಿದ ಸಂತಾಪ ಸೂಚನೆಯ ನಿರ್ಣಯದ ಪ್ರತಿಯನ್ನು ಮೃತರ ಕುಟುಂಬಕ್ಕೆ ಕಳುಹಿಸಲಾಗುವುದು.

ಶ್ರೀ ಬಿ.ಎಸ್.ಯಡಿಯೂರಪ್ಪ(ಮುಖ್ಯಮಂತ್ರಿಗಳು): ಸನ್ಮಾನ್ಯ ಅಧ್ಯಕ್ಷರೇ, ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಎನ್.ಎಸ್.ಗುರುಸಿದ್ದಪ್ಪರವರು ಹಾಗೂ ವಿಧಾನ ಪರಿಷತ್ತಿನ ಹಾಲಿ ಸದಸ್ಯರಾಗಿದ್ದ ಶ್ರೀ ಎಸ್.ಕೈಲಾಸ್‌ರವರು ನಿಧನರಾಗಿರುವ ಬಗ್ಗೆ ತಾವೇನು ಸಂತಾಪ ಸೂಚನೆಯನ್ನು ಮಂಡನೆ ಮಾಡಿದ್ದೀರಿ ಅದಕ್ಕೆ ನನ್ನ ಧ್ವನಿಯನ್ನು ಕೂಡಿಸುತ್ತಾ ವಿಧಾನ ಪರಿಷತ್ತಿನ ಹಾಲಿ ಸದಸ್ಯರಾದಂಥ ಶ್ರೀ ಎಸ್. ಕೈಲಾಸ್‌ರವರು ಇಂದು ಬೆಳಗ್ಗೆ ನಮ್ಮನ್ನು

ಅಗಲಿದ್ದಾರೆ. ಸುದೀರ್ಘ ಕಾಲದಿಂದ ಅನಾರೋಗ್ಯಕ್ಕೆ ಒಳಗಾಗಿದ್ದ ಅವರು ಭಾರತೀಯ ಜನತಾ ಪಕ್ಷದ ಕಾರ್ಯಕರ್ತರಾಗಿ ಎಲ್ಲಾ ಹಂತದಲ್ಲಿ ಜನ ಸಂಘದ ಕಾಲದಿಂದ ದಶಕಗಳಿಂದ ದುಡಿದು ಆರ್.ಎಸ್.ಎಸ್.ನ. ಒಬ್ಬ ಪ್ರಾಮಾಣಿಕ ಸ್ವಯಂ ಸೇವಕರಾಗಿ, ಬೆಂಗಳೂರು ಮಹಾನಗರದಲ್ಲಿ ಪಕ್ಷದ ಸಂಘಟನೆಯನ್ನು ಯಶಸ್ವಿಯಾಗಿ ಮಾಡಿದವರಲ್ಲಿ ಕೈಲಾಶ್‌ರವರು ಅತ್ಯಂತ ಪ್ರಮುಖರು. ನಗರ ಬಿಜೆಪಿಯ ಎಲ್ಲಾ ಸಂಘಟನಾತ್ಮಕ ಜವಾಬ್ದಾರಿಯನ್ನು ನಿರ್ವಹಿಸಿದ್ದರು. ನಗರ ಬಿಜೆಪಿ ಅಧ್ಯಕ್ಷರಾಗಿ ರಾಜ್ಯ ಸಮಿತಿಯ ಕಾರ್ಯದರ್ಶಿಯಾಗಿ ಕೂಡ ಕಾರ್ಯನಿರ್ವಹಿಸಿದ್ದರು. ನಮ್ಮ ಪಕ್ಷದ ಪ್ರಚಾರ ಸಭೆಗಳಲ್ಲಿ ಮುಂಚೂಣಿಯಲ್ಲಿ ನಿಂತು ನಮ್ಮ ಪಕ್ಷದ ಸಂಘಟನೆಯನ್ನು ಬಲಪಡಿಸುವುದರಲ್ಲಿ ಪ್ರಮುಖರಾಗಿದ್ದರು. ಸೈದ್ಧಾಂತಿಕವಾಗಿ ಅವರ ಬದ್ಧತೆ ನಮಗೆಲ್ಲರಿಗೂ ಅನುಕರಣೀಯವಾಗಿದೆ. ಉತ್ತಮ ಭಾಷಣಕಾರರಾಗಿದ್ದ ಕೈಲಾಸ್‌ರವರು ನಮಗೆ ಎಲ್ಲಾ ಹಂತದಲ್ಲಿ ಮಾರ್ಗದರ್ಶನವನ್ನು ಮಾಡುತ್ತಿದ್ದರು. ಆರೋಗ್ಯ ಸರಿ ಇಲ್ಲದಿದ್ದ ಸಂದರ್ಭದಲ್ಲಿಯೂ ಸಹ ವಿಧಾನ ಪರಿಷತ್ತಿನ ಸದಸ್ಯರಾಗಿ ಅವರನ್ನು ನೇಮಿಸಿದೆವು. ಅವರ ಆರೋಗ್ಯ ಸರಿಯಿಲ್ಲದಿದ್ದರೂ ಸಹ ತಮ್ಮ ಕರ್ತವ್ಯವನ್ನು ಬಹಳ ಒಳ್ಳೆಯ ರೀತಿಯಲ್ಲಿ ನಿರ್ವಹಿಸಿಕೊಂಡು ಬಂದರು. ಕಳೆದ 25–30 ವರ್ಷಗಳಿಂದ ಬೆಂಗಳೂರಿನಲ್ಲಿ ಇದ್ದು ನಮ್ಮ ಎಲ್ಲಾ ಹಂತದಲ್ಲಿ ಸಂಘಟನೆಗೆ ಸಹಕಾರಿಗಳಾಗಿದ್ದರು. ತೆರೆ ಮರೆಯಲ್ಲಿದ್ದುಕೊಂಡು ಅಹರ್ನಿಶಿ ಹೋರಾಟ ಮತ್ತು ಸೇವಾ ಚಟುವಟಿಕೆ ಗಳಲ್ಲಿ ತಲ್ಲೀನರಾಗಿದ್ದರು. ಎಂ.ಇ.ಐ. ಫ್ಯಾಕ್ಟರಿಯಲ್ಲಿ ಕಾರ್ಮಿಕರಾಗಿ ಕಾರ್ಮಿಕ ಮುಖಂಡರಾಗಿ ತುರ್ತು ಪರಿಸ್ಥಿತಿಯಲ್ಲಿ ಬೆಂಗಳೂರು ಮತ್ತು ಬಳ್ಳಾರಿ ಜಿಲ್ಲೆಯ ಜೈಲುವಾಸ ಅನುಭವಿಸಿದ್ದರು. ಕಾರ್ಮಿಕರ ಯಾವುದೇ ಸಮಸ್ಯೆಗಳು ಬಂದಾಗ ಮುಂಚೂಣಿಯಲ್ಲಿದ್ದು ಹೋರಾಟ ಮಾಡಿಕೊಂಡು ಬಂದಂಥ ಆ ವ್ಯಕ್ತಿಯನ್ನು ಇವತ್ತು ಕಳೆದುಕೊಂಡು ನಮ್ಮ ಪಕ್ಷ ಬಡವಾಗಿದೆ, ನಮ್ಮ ಪಕ್ಷದ ಸಂಘಟನೆಗೆ ಬಲವಾದ ಪೆಟ್ಟು ಬಿದ್ದಿದೆ. ವಿಧಾನಸಭೆಯ ಮಾಜಿ ಸದಸ್ಯರಾಗಿದ್ದಂಥ ಶ್ರೀ ಎನ್.ಎಸ್. ಗುರುಸಿದ್ದಪ್ಪನವರು 1934ನೇ ಫೆಬ್ರವರಿ 13 ರಂದು ಜನಿಸಿ, ವೃತ್ತಿಯಲ್ಲಿ ವಕೀಲರಾಗಿ ಕೃಷಿಕರಾಗಿ ಸಹಕಾರ ಕ್ಷೇತ್ರದಲ್ಲಿ ಹಾಗೂ ಹಳ್ಳಿಗಳ ಅಭಿವೃದ್ಧಿಗಾಗಿ ಶ್ರಮಿಸಿದಂಥ ವ್ಯಕ್ತಿಯನ್ನು ನಾವು ಕಳೆದುಕೊಂಡಿ ದ್ದೇವೆ. ಕೈಲಾಶ್‌ರವರು ಇವತ್ತು ನಿಧನರಾಗಿರುವಂಥ ಸಂದರ್ಭದಲ್ಲಿ ಇವತ್ತು ಮಧ್ಯಾಹ್ನವೇ ಅವರ ಅಂತ್ಯ ಕಾರ್ಯಕ್ರಮವನ್ನು ಮಾಡಬೇಕೆಂದು ನಮ್ಮ ಪಕ್ಷ ನಿಶ್ಚಯಿಸಿದೆ, ನಾವೆಲ್ಲಾ ಶಾಸಕರು ಆ

ಕಾರ್ಯಕ್ರಮದಲ್ಲಿ ಭಾಗವಹಿಸಬೇಕಾಗಿ ರುವುದರಿಂದ ದಯಮಾಡಿ ಶ್ರದ್ಧಾಂಜಲಿ ಮುಗಿದ ಮೇಲೆ ಅಧಿವೇಶನವನ್ನು ಮುಂದೂಡಬೇಕೆಂದು ತಮ್ಮಲ್ಲಿ ವಿನಂತಿಯನ್ನು ಮಾಡಿ, ಅವರ ಆತ್ಮಕ್ಕೆ ಶಾಂತಿ ಕೋರಿ ನನ್ನ ನಾಲ್ಕು ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ನಗರಾಭಿವೃದ್ಧಿ ಸಚಿವರು) : ಸನ್ಮಾನ್ಯ ಸಭಾಧ್ಯಕ್ಷರೇ, ಇವತ್ತು ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಎನ್.ಎಸ್. ಗುರುಸಿದ್ದಪ್ಪರವರು ಹಾಗೂ ವಿಧಾನ ಪರಿಷತ್ತಿನ ಹಾಲಿ ಸದಸ್ಯರಾಗಿದ್ದ ಶ್ರೀ ಎಸ್.ಕೈಲಾಸ್‌ರವರು ನಿಧನರಾಗಿ ರುವುದಕ್ಕೆ ತಾವೇನು ಶ್ರದ್ಧಾಂಜಲಿಯನ್ನು ಅರ್ಪಿಸಿದ್ದೀರಿ ಅದರ ಜೊತೆಗೆ ನನ್ನ ಧ್ವನಿಯನ್ನು ಸೇರಿಸುತ್ತಾ ವಿಶೇಷವಾಗಿ ವಿಧಾನ ಪರಿಷತ್ತಿನ ಹಾಲಿ ಸದಸ್ಯರಾಗಿದ್ದ ಶ್ರೀ ಎಸ್.ಕೈಲಾಸ್‌ರವರು ನಮ್ಮಲ್ಲಿ ಅನೇಕರಿಗೆ ವಿಶೇಷವಾಗಿ ನನಗೆ ಒಂದು comrade ರೀತಿಯಲ್ಲಿ ಸಹವರ್ತಿಯಾಗಿ ಅನೇಕ ವರ್ಷಗಳ ಕಾಲ ಕೆಲಸ ಮಾಡಿಕೊಂಡು ಬಂದಿದ್ದಾರೆ. ಇವತ್ತು we cannot just believe. ನನ್ನ ಹಾಗೂ ಕೈಲಾಸ್‌ರವರ ಒಡನಾಟ ಕಳೆದ ನಾಲ್ಕು ದಶಕಗಳದ್ದು ಎಂದು ಹೇಳಿದರೆ ಅದು ಉತ್ಪ್ರೇಕ್ಷ ಆಗುವುದಿಲ್ಲ.

ನಾನು ಆ ಕಾಲದಿಂದ ನೋಡಿಕೊಂಡು ಬಂದಿದ್ದೇನೆ. ಒಬ್ಬ ಹೋರಾಟಗಾರ ಹೇಗಿರಬೇಕು ಎಂಬ ಬಗ್ಗೆ ತಮ್ಮ ಜೀವನದ ಮೂಲಕ ಅವರು ಎಲ್ಲರಿಗೂ ತೋರಿಸಿದ್ದರು. MEI factory ಯಲ್ಲಿ ಕಾರ್ಮಿಕ ನಾಯಕರಾಗಿದ್ದರು. MEI factory ಬಿಟ್ಟ ನಂತರ ಒಬ್ಬ ರಾಜಕೀಯ ಪಕ್ಷದ ಪೂರ್ಣಾವಧಿ ಕಾರ್ಯಕರ್ತರಾಗಿ, ರಾಜಕೀಯ ಪಕ್ಷವೇ ನನ್ನ ಮನೆ, ನನ್ನ ಕುಟುಂಬ ಎನ್ನುವ ಮನೋಭಾವದಿಂದ ಕಾರ್ಯ ಮಾಡಿಕೊಂಡು ಬಂದಿದ್ದರು. ಬೆಂಗಳೂರಿನಲ್ಲಿ ಜನಪರ ವಿಚಾರಕ್ಕೆ ಸಂಬಂಧಿಸಿದ ಯಾವುದೇ ಹೋರಾಟವಿರಲಿ ಮುಂಚೂಣಿಯಲ್ಲಿರುತ್ತಿದ್ದವರು ಎಂದರೆ ದಿವಂಗತ ಎಸ್.ಕೈಲಾಸ್‌ರವರು. ವಿಶೇಷವಾಗಿ ಕಾರ್ಮಿಕ ನಾಯಕರಾಗಿ, ಸಾಮಾನ್ಯವಾಗಿ organized labour ಬಗ್ಗೆ ಎಲ್ಲರೂ ಕೂಡ ಯೋಚನೆ ಮಾಡುತ್ತಾರೆ. ಆದರೆ, ಮಾನ್ಯ ಎಸ್.ಕೈಲಾಸ್‌ರವರು ಅಸಂಘಟಿತ ಕಾರ್ಮಿಕ ಕ್ಷೇತ್ರದ ಬಗ್ಗೆ ಯೋಚನೆ ಮಾಡುತ್ತಾ, ತನ್ನ ಕಳಕಳಿಯನ್ನು ತೋರಿಸುತ್ತಾ ಅವರಿಗೆ ಏನಾದರೂ ಪರಿಹಾರವನ್ನು ನಾವು ಕೊಡಬೇಕು ಎಂದು ತುಡಿತದಿಂದ ಕೆಲಸ

ಮಾಡುತ್ತಿದ್ದರು. 1988ನೇ ಇಸವಿಯಿಂದ 1991ನೇ ಇಸವಿಯವರೆಗೂ ನನ್ನ ಜೊತೆ ಬೆಂಗಳೂರಿನ ಬಿಜೆಪಿಯ ಪ್ರಮುಖ ಪದಾಧಿಕಾರಿಯಾಗಿ ಕೆಲಸ ಮಾಡಿದ್ದಾರೆ. ಈಗಾಗಲೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಾಗೆ ಯಾವುದೇ ಒಂದು ಸಭೆಯಲ್ಲಿ ಅದು ಪ್ರಚಾರ ಸಭೆಯಿರಲಿ ಅಥವಾ ಬೇರೆ ಸಭೆಯಿರಲಿ ಮಾನ್ಯ ಎಸ್.ಕೈಲಾಸ್‌ರವರು ಮುಂಚಿತವಾಗಿ ಸಿದ್ಧತೆ ಮಾಡಿಕೊಂಡು ಹೋಗಿ ಭಾಗವಹಿಸುತ್ತಿದ್ದರು. ಇದು ಬಹಳ ಅಪರೂಪ. ಇವತ್ತಿನ ಸನ್ನಿವೇಶದಲ್ಲಿ ತನ್ನ ಸ್ವಂತ ಜೀವನವನ್ನು ಮರೆತು ಒಂದು ರಾಜಕೀಯ ಸಂಘಟನೆಗೆ ಮತ್ತು ಸಾಮಾಜಿಕ ಉದ್ದೇಶಕ್ಕಾಗಿ ತನ್ನನ್ನು ತಾನೇ ಸಮರ್ಪಿಸಿಕೊಳ್ಳುವುದು ಇವತ್ತು ಬಹಳಷ್ಟು ಕಡೆಗಳಲ್ಲಿ ನಾವು ಕಾಣುತ್ತಿಲ್ಲ. ಅಂತಹ ಒಬ್ಬ ಧೀಮಂತ ಹೋರಾಟಗಾರ, ಒಬ್ಬ ಧೀಮಂತ ಸಂಘಟಿಗ ಮತ್ತು ಯಾವಾಗಲೂ ಸಂಘಟನೆ ಬಗ್ಗೆ ಹಾಗೂ ಸಮಾಜದ ಬಗ್ಗೆ ಚಿಂತನೆ ನಡೆಸುತ್ತಿದ್ದಂತಹ ಮಾನ್ಯ ಎಸ್.ಕೈಲಾಸ್‌ರವರನ್ನು ನಾವು ಇವತ್ತು ಕಳೆದುಕೊಂಡಿದ್ದೇವೆ. ಸಾಮಾನ್ಯವಾಗಿ ಯಾರನ್ನೇ ಕಳೆದುಕೊಂಡರೂ ಸಹ ನಾವು ಈ ರೀತಿ ಹೇಳಿಬಿಡುತ್ತೇವೆ. ಸಮಾಜ ಬಡವಾಗಿದೆ, ಹಾಗೆ ಆಯಿತು, ಹೀಗೆ ಆಯಿತು ಎಂದು ಹೇಳುತ್ತೇವೆ. ಆದರೆ ಮಾನ್ಯ ಎಸ್.ಕೈಲಾಸ್‌ರವರ ಸಾವಿನಿಂದ ನಮ್ಮ ಸಂಘಟನೆಗೆ ಬಲವಾದ ಒಂದು ಪೆಟ್ಟು ಬಿದ್ದಿದೆ. ಆ ಸ್ಥಾನವನ್ನು ತುಂಬುವುದು ಬಹಳ ಕಷ್ಟವಿದೆ. ಕೊನೆಯ ದಿವಸಗಳಲ್ಲಿ ವಿಶೇಷವಾಗಿ ಮೂತ್ರ ಪಿಂಡ ಸಮಸ್ಯೆಯಿಂದ ಪೀಡಿತರಾಗಿ ಬಹಳ ಒದ್ದಾಡಿದರು. ಅಂತಹ ಒಬ್ಬ ಮಾನ್ಯ ಎಸ್.ಕೈಲಾಸ್‌ರವರನ್ನು ನಾವು ಕಳೆದುಕೊಂಡಿದ್ದೇವೆ. ಈಗ ಅವರ ಪಾರ್ಥಿವ ಶರೀರ ನಮ್ಮ ಶಾಸಕರ ಭವನಕ್ಕೆ ಬಂದಿದೆ. ಏಕೆಂದರೆ, ಶಾಸಕರ ಭವನ ಮತ್ತು ಎಸ್.ಕೈಲಾಸ್ ರವರದು ಅವಿನಾಭಾವ ಸಂಬಂಧ. ಕಳೆದ 25 ವರ್ಷಗಳಿಂದ ಅವರು ಶಾಸಕರ ಭವನದಲ್ಲಿಯೇ ಉಳಿದು ಕೊಂಡು ಸಮಾಜದ ಬಗ್ಗೆ ಕೆಲಸ ಮಾಡಿಕೊಂಡು ಬಂದಿದ್ದಾರೆ. ಅವರ ಪಾರ್ಥಿವ ಶರೀರ ಬಂದಿದೆ. ನಾವೆಲ್ಲರೂ ಕೂಡ ಹೋಗಿ ಅಲ್ಲಿ ಅವರ ದರ್ಶನ ಪಡೆಯೋಣ. ನಂತರ ಒಂದು ಗಂಟೆಗೆ ಅವರ ಅಂತಿಮ ಕ್ರಿಯೆ ಇಟ್ಟುಕೊಂಡಿದ್ದೇವೆ. ನಾನು ಇಡೀ ಸದನದ ಜೊತೆಗೆ ಮಾನ್ಯ ಎಸ್.ಕೈಲಾಸ್‌ರವರ ಆತ್ಮಕ್ಕೆ ಚಿರ ಶಾಂತಿಯನ್ನು ಕೋರುತ್ತಾ, ಅವರ ಬದುಕು ನಮಗೆಲ್ಲಾ ಮಾರ್ಗದರ್ಶನವಾಗಲಿ ಎಂದು ಕೇಳಿಕೊಂಡು ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಅಧ್ಯಕ್ಷರೆ, ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಎನ್.ಎಸ್. ಗುರುಸಿದ್ದಪ್ಪ ಹಾಗೂ ವಿಧಾನ ಪರಿಷತ್ತಿನ ಹಾಲಿ ಸದಸ್ಯರಾಗಿದ್ದ ಶ್ರೀ ಎಸ್.ಕೈಲಾಸ್‌ರವರ ನಿಧನಕ್ಕೆ ಈ ಸದನ ಶ್ರದ್ಧಾಂಜಲಿ ಸಲ್ಲಿಸತಕ್ಕಂತಹ ಈ ಸಂದರ್ಭದಲ್ಲಿ ನಾನು ಕೂಡ ಅದಕ್ಕೆ ಧ್ವನಿಗೂಡಿಸುತ್ತಾ, ಮಾಜಿ ಸದಸ್ಯರಾಗಿದ್ದ ಸನ್ಮಾನ್ಯ ಎನ್.ಎಸ್.ಗುರುಸಿದ್ದಪ್ಪನವರು ಐದನೇ ಸಭೆಯಲ್ಲಿ ಶಾಸಕರಾಗಿ ಕೆಲಸ ಮಾಡಿ, ವೃತ್ತಿಯಲ್ಲಿ ವಕೀಲರಾಗಿ ಹಾಗೂ ಕೃಷಿಕರಾಗಿ ಸಹಕಾರ ಕ್ಷೇತ್ರದಲ್ಲಿ ಮತ್ತು ಹಳ್ಳಿಗಳ ಅಭಿವೃದ್ಧಿಗೋಸ್ಕರ ಶ್ರಮಿಸಿದಂತಹ ವ್ಯಕ್ತಿ. ಬಹುಶಃ ಇತ್ತೀಚಿನ ರಾಜಕಾರಣವನ್ನು ನೋಡಿದ್ದರೆ ಅವರಿಗೂ ಸಹ ಅಸಹ್ಯವಾಗುತ್ತಿತ್ತು ಎಂದು ನಾನು ಭಾವಿಸುತ್ತೇನೆ. ಸನ್ಮಾನ್ಯ ಎಸ್.ಕೈಲಾಸ್‌ರವರು ಉತ್ತಮವಾದಂತಹ ವಾಚಾಳಿ. ಹಾಲಿ ವಿಧಾನ ಪರಿಷತ್ತಿನ ಸದಸ್ಯರಾಗಿದ್ದಂತಹ ಮಾನ್ಯ ಎಸ್.ಕೈಲಾಸ್‌ರವರು ದಿವಂಗತ ಜಯಪ್ರಕಾಶ್ ನಾರಾಯಣ್‌ರವರ ನೇತೃತ್ವದಲ್ಲಿ ಜನಪರ ಹೋರಾಟಗಳಲ್ಲಿ ಹಾಗೂ ಜನಸಂಘಟನೆಗಳಲ್ಲಿ ಸದಾ ಮುಂಚೂಣಿಯಲ್ಲಿದ್ದಂತಹವರು. ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಸೆರೆಮನೆ ವಾಸವನ್ನು ಸಹ ಅನುಭವಿಸಿದಂತಹವರು. ಧ್ವನಿಯಿಲ್ಲದೇ ಇರತಕ್ಕಂತಹ ವ್ಯಕ್ತಿಗಳಿಗೆ ಧ್ವನಿಯಾಗಿ ಕೆಲಸ ಮಾಡಿದಂತಹ ಮಾನ್ಯ ಎಸ್.ಕೈಲಾಸ್‌ರವರು ಇವತ್ತು ನಿಧನರಾಗಿರುವುದು ಎಲ್ಲರಿಗೂ ಕೂಡ ದುಃಖವನ್ನು ತರತಕ್ಕಂತಹ ವಿಚಾರ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳಿ ದಯಾಮಯನಾದ ಭಗವಂತ ಅವರ ಕುಟುಂಬಕ್ಕೆ ಅವರ ಅಗಲಿಕೆಯನ್ನು ಭರಿಸತಕ್ಕಂತಹ ಶಕ್ತಿಯನ್ನು ನೀಡಲಿ ಎಂದು ಈ ಸಂದರ್ಭದಲ್ಲಿ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಎನ್.ಎಸ್.ಗುರುಸಿದ್ದಪ್ಪನವರು ಮತ್ತು ಹಾಲಿ ವಿಧಾನಪರಿಷತ್ತಿನ ಸದಸ್ಯರಾಗಿದ್ದಂತಹ ಮಾನ್ಯ ಎಸ್.ಕೈಲಾಸ್‌ರವರ ಬಗ್ಗೆ ತಾವು ಸಂತಾಪ ಸೂಚನೆಯನ್ನು ಮಾಡಿದ್ದೀರಿ. ಅದಕ್ಕೆ ನಾನು ಬೆಂಬಲ ವ್ಯಕ್ತಪಡಿಸುತ್ತಾ, ವಿಶೇಷವಾಗಿ ಮಾನ್ಯ ಎಸ್.ಕೈಲಾಸ್‌ರವರ ಬಗ್ಗೆ ಹೇಳಬೇಕೆಂದರೆ, ಇವತ್ತು ಇಡೀ ಜೀವನವನ್ನು ಒಂದು ರಾಜಕೀಯ ಪಕ್ಷಕ್ಕೆ ಸಮರ್ಪಣೆ ಮಾಡಿಕೊಂಡಂತಹ ವ್ಯಕ್ತಿ ಇವರು ಆಗಿದ್ದಾರೆ. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸ್ವಯಂ ಸೇವಕನಾಗಿ ಮತ್ತು ಒಂದು ರಾಜಕೀಯ ಪಕ್ಷದ ಕಾರ್ಯಕರ್ತರಾಗಿ, ಬ್ರಹ್ಮಚಾರಿಯಾಗಿ, ತಮ್ಮ ಪೂರ್ಣ ಜೀವನವನ್ನು ಭಾರತೀಯ

ಜನತಾ ಪಾರ್ಟಿಯ ಸಂಘಟನೆಗೆ ಸಮರ್ಪಣೆ ಮಾಡಿದಂತಹ ವ್ಯಕ್ತಿಯಾಗಿ ದ್ದರು. ನಾನು ರಾಜ್ಯ ಬಿಜೆಪಿಯ ಅಧ್ಯಕ್ಷನಾಗಿದ್ದಂತಹ ಸಂದರ್ಭದಲ್ಲಿ ಅವರು ಕಾರ್ಯದರ್ಶಿಗಳಾಗಿ ಕೆಲಸ ಮಾಡುತ್ತಿದ್ದರು. ಇವತ್ತು ಯಾವುದೇ ಒಂದು ಸಮಸ್ಯೆ ಬಂದಾಗ ಅದಕ್ಕೆ ಪರಿಹಾರ ಹುಡುಕುವಂತಹ ದಿಕ್ಕಿನಲ್ಲಿ ಎಲ್ಲಾ ರೀತಿಯಾದ ಉತ್ತಮ ಸಲಹೆ-ಸೂಚನೆಗಳನ್ನು ಕೊಡುವಂತಹ ವ್ಯಕ್ತಿ ಅವರಾಗಿದ್ದರು. ಯಾವುದೇ ಜಿಲ್ಲೆಯಲ್ಲಿ ಯಾವುದೇ ಸಂದರ್ಭದಲ್ಲಿ ಸಂಘಟನೆಗೆ ಸಂಬಂಧಪಟ್ಟಂತೆ ಏನಾದರೂ ಸಮಸ್ಯೆಗಳು ಬಂದಾಗ ನಮ್ಮ ಪಕ್ಷದಿಂದ ಯಾರನ್ನಾದರೂ ಕಳುಹಿಸುವುದು ಇದ್ದರೆ ಮಾನ್ಯ ಎಸ್.ಕೈಲಾಸ್ ರವರನ್ನು ಅಲ್ಲಿಗೆ ಕಳುಹಿಸುತ್ತಿದ್ದೆವು. ಅಲ್ಲಿ ಶಾಂತಿಯನ್ನು ತಂದು, ಸಮಾಧಾನ ಮಾಡಿ ಅದಕ್ಕೆ ಏನಾದರೂ ಪರಿಹಾರ ಹುಡುಕುವುದಕ್ಕೆ ಕಳುಹಿಸುತ್ತಿದ್ದೆವು. ಈ ರೀತಿ ಮಾನ್ಯ ಎಸ್.ಕೈಲಾಸ್‌ರವರು ಎಲ್ಲಿಗಾದರೂ ಹೋಗಿ ಬಂದರೆ ಅಲ್ಲಿ ಪರಿಹಾರವಿರುತ್ತಿತ್ತು ಹಾಗೂ ಅಲ್ಲಿ ಶಾಂತವಾದ ವಾತಾವರಣ ನಿರ್ಮಾಣ ವಾಗುತ್ತಿತ್ತು. ಆ ರೀತಿಯಾದ ವ್ಯಕ್ತಿತ್ವವನ್ನು ಮಾನ್ಯ ಎಸ್.ಕೈಲಾಸ್‌ರವರು ಹೊಂದಿದ್ದರು. ಇಡೀ ರಾಜ್ಯದ ಎಲ್ಲಾ ಕಾರ್ಯಕರ್ತರು ಮಾನ್ಯ ಎಸ್.ಕೈಲಾಸ್‌ರವರ ಬಗ್ಗೆ ಬಹಳಷ್ಟು ಹೆಚ್ಚಿನ ಗೌರವ ಭಾವನೆ ಇಟ್ಟುಕೊಂಡಿದ್ದರು. ಅಂತಹ ಒಬ್ಬ ಕೈಲಾಸ್‌ರವರು ಎಲ್ಲರಿಗೂ ಮಾದರಿಯಾ ಗಿದ್ದರು. ಇವತ್ತು ರಾಜಕೀಯ ಸಂಘಟನೆಗಳಿಗೆ, ರಾಜಕೀಯ ವ್ಯಕ್ತಿಗಳಿಗೆ ಹಾಗೂ ರಾಜಕೀಯ ನಾಯಕರಿಗೆ ಒಬ್ಬ ಆದರ್ಶ ವ್ಯಕ್ತಿ ಯಾರೆಂದರೆ ಅವರು ಮಾನ್ಯ ಎಸ್.ಕೈಲಾಸ್‌ರವರು. ಅವರು ಎಂ.ಎಲ್.ಸಿ. ಆಗುವುದಕ್ಕಿಂತ ಮುಂಚೆ ಮಣಿಪಾಲ್ ಆಸ್ಪತ್ರೆಯಲ್ಲಿ ಅಡ್ಮಿಟ್ ಆಗಿದ್ದರು. ಆ ಸಂದರ್ಭದಲ್ಲಿ ನಾನು ಅವರನ್ನು ಭೇಟಿಯಾಗಲು ಹೋಗಿದ್ದೆ. ನಾನು ಅವರ ಕುಶಲೋಪಚಾರವನ್ನು ಕೇಳುವುದಕ್ಕೆ ಹೋದಂತಹ ಸಂದರ್ಭದಲ್ಲಿ ಕೆಲವರು ಅವರನ್ನು ಕೇಳಿದರು. ನೀವು ವಿಧಾನ ಪರಿಷತ್ತಿನ ಸದಸ್ಯರಾಗಬೇಕಾಗಿತ್ತು ಎಂದು ಕೇಳಿದರು. ಆಗ ಮಾನ್ಯ ಎಸ್.ಕೈಲಾಸ್‌ರವರು ಒಂದು ಮಾತನ್ನು ಹೇಳಿದರು. ನಾನು ನನ್ನ ಜೀವನದಲ್ಲಿ ರಾಜಕೀಯ ಸಂಘಟನೆಗೆ ಬಂದಿದ್ದೇನೆ. ಈ ವಿಚಾರ ಧಾರೆಗೆ ನಾನು ಬಂದಿರುವುದರಿಂದ ನಾನು ಈ ವಿಚಾರ ಧಾರೆಗೆ ನನ್ನನ್ನು ಸಮರ್ಪಣೆ ಮಾಡಿಕೊಂಡಿದ್ದೇನೆ. ನನಗೆ ವೈಯಕ್ತಿಕವಾದಂತಹ ಯಾವುದೇ ಆಸೆ-ಆಕಾಂಕ್ಷೆಗಳಿಲ್ಲ. ಆದರೆ, ಇವತ್ತು ಇಡೀ ರಾಜ್ಯದಿಂದ ಬಂದಂತಹ ಕಾರ್ಯಕರ್ತರು ನನಗೆ ಏನಾದರೂ ಹುದ್ದೆಯನ್ನು ಕೊಡಲೇಬೇಕಾಗಿತ್ತು ಎಂದು ದಿನನಿತ್ಯ ನನಗೆ ಬಂದು ಹೇಳುತ್ತಿದ್ದಾರೆ, ಅದು ನನಗೆ ಬಹಳ

ತೊಂದರೆಯಾಗಿದೆ. ಇದು ಪಕ್ಷಕ್ಕೆ ಬಿಟ್ಟು ವಿಚಾರ. ಆದರೆ, ನನಗೆ ಯಾವುದೇ ಆಸೆ-ಆಕಾಂಕ್ಷೆಯು ಸಹ ಇಲ್ಲವೆಂದು ಹೇಳುತ್ತಿದ್ದರು. ಕೊನೆಗೆ ಪಕ್ಷವೇ ತೀರ್ಮಾನ ಮಾಡಿ ಅವರನ್ನು ವಿಧಾನ ಪರಿಷತ್ತಿನ ಸದಸ್ಯರನ್ನಾಗಿ ಮಾಡಿದರು. ಅಲ್ಪಕಾಲಾವಧಿಯಲ್ಲಿಯೇ ಬಹಳ ಉತ್ತಮವಾದಂತಹ ಕೆಲಸವನ್ನು ಮಾನ್ಯ ಎಸ್.ಕೈಲಾಸ್‌ರವರು ಮಾಡಿದರು. ಒಂದು ರಾಜಕೀಯ ಸಂಘಟನೆಗೆ, ಒಂದು ಸಮಾಜದ ಸಂಘಟನೆಗೆ ಹಾಗೂ ಸಮಾಜದ ಕೆಲಸಕ್ಕಾಗಿ ಅಂತಹ ವ್ಯಕ್ತಿಗಳು ಸಿಗುವಂತಹದ್ದು ಇವತ್ತಿನ ವ್ಯವಸ್ಥೆಯಲ್ಲಿ ಬಹಳ ದುರ್ಲಬವಾದಂತಹದ್ದು. ಅಂತಹವರ ಮಾರ್ಗದರ್ಶನ ಹಾಗೂ ಆದರ್ಶವನ್ನು ನಾವೆಲ್ಲರೂ ಪಾಲನೆ ಮಾಡುವ ಮುಖಾಂತರ ನಿಜವಾಗಿಯೂ ಸಹ ಅವರ ಆತ್ಮಕ್ಕೆ ಶಾಂತಿಯನ್ನು ಕೋರುವುದಕ್ಕೆ ಸಾಧ್ಯತೆಯಿದೆ. ಅದಕ್ಕಾಗಿ ಅವರ ಆತ್ಮಕ್ಕೆ ಶಾಂತಿಯನ್ನು ಕೋರಿ ಭಗವಂತನು ಅವರ ಅಗಲಿಕೆಯಿಂದ ಉಂಟಾಗಿರುವ ದುಃಖವನ್ನು ಭರಿಸತಕ್ಕಂತಹ ಶಕ್ತಿಯನ್ನು ನಮಗೂ ಹಾಗೂ ಅವರ ಕುಟುಂಬ ಸದಸ್ಯರಿಗೂ ಕೊಡಲಿ ಎಂದು ಪ್ರಾರ್ಥನೆ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ತಾವು ತಂದಿರತಕ್ಕಂತಹ ಈ ಸಂತಾಪ ಸೂಚನೆಯ ನಿರ್ಣಯವನ್ನು ಬೆಂಬಲಿಸುತ್ತಾ, ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದಂತಹ ಮಾನ್ಯ ಎನ್.ಎಸ್.ಗುರುಸಿದ್ದಪ್ಪನವರು ನಮ್ಮ ಮೈಸೂರು ಜಿಲ್ಲೆಯವರು. ಅವರು ಈ ಮನೆಯ ಸದಸ್ಯರಾಗಿದ್ದರು. ಸದಸ್ಯರಾಗಿ 5 ವರ್ಷಗಳ ಕಾಲ ಕೆಲಸ ಮಾಡಿದಂತಹ ಒಬ್ಬ ಹಿರಿಯ ನಾಯಕರು. ಕೃಷಿಕ ಕುಟುಂಬದಲ್ಲಿ ಹುಟ್ಟಿದಂತಹವರು. ರೈತರ ಪರ ಕಾಳಜಿಯನ್ನು ಇಟ್ಟುಕೊಂಡು, ಗ್ರಾಮೀಣಾಭಿವೃದ್ಧಿಯ ಪರ ಕಾಳಜಿಯನ್ನು ಇಟ್ಟುಕೊಂಡು ಕೆಲಸ ಮಾಡಿಕೊಂಡು, ಸಹಕಾರ ಕ್ಷೇತ್ರದಲ್ಲಿಯೂ ಕೂಡ ಅವರು ತೊಡಗಿಸಿಕೊಂಡಿದ್ದರು. ಹಳ್ಳಿಗಾಡಿನ ಸಮಸ್ಯೆಗಳು ಬಂದಾಗ, ಕೃಷಿ ಸಮಸ್ಯೆಗಳು ಬಂದಾಗ ಹಾಗೂ ಗ್ರಾಮೀಣಾಭಿವೃದ್ಧಿಗೆ ಸಂಬಂಧಪಟ್ಟಂತೆ ವಿಷಯಗಳು ಬಂದಾಗ ಯಾವಾಗಲೂ ಆ ಸಮಸ್ಯೆಗಳ ಬಗ್ಗೆ ಸದಾ ಧ್ವನಿ ಎತ್ತುತ್ತಿದ್ದಂತಹ ಕೆಲಸವನ್ನು ಮಾನ್ಯ ಎನ್.ಎಸ್. ಗುರುಸಿದ್ದಪ್ಪನವರು ಮಾಡಿತ್ತಿದ್ದರು ಎನ್ನುವುದನ್ನು ಇವತ್ತು ನಾವೆಲ್ಲರೂ ಕೂಡ ಸ್ಮರಿಸಿಕೊಳ್ಳಬೇಕಾಗುತ್ತದೆ.

(11-30 AM)

ಕೃಷಿ ಕ್ಷೇತ್ರದಲ್ಲಿ ಇವತ್ತು ಹೆಚ್ಚು ಉತ್ಪಾದನೆ ಮಾಡಬೇಕಾದರೆ ಹೊಸ ಹೊಸ ತಂತ್ರಜ್ಞಾನವನ್ನು ಬಳಸಿಕೊಳ್ಳಬೇಕು. ಹೊಸ ತಳಿಗಳನ್ನು ನಾವು ಕಂಡುಹಿಡಿಯಬೇಕು. ಆಹಾರದ ಉತ್ಪಾದನೆಯನ್ನು ಹೆಚ್ಚು ಮಾಡಬೇಕು. ರೈತರಿಗೆ ಆದಾಯ ಹೆಚ್ಚು ಬರತಕ್ಕಂಥ ರೀತಿಯಲ್ಲಿ ನೋಡಿಕೊಳ್ಳಬೇಕು. ಅವರ ಆರ್ಥಿಕ ಪರಿಸ್ಥಿತಿ ಸುಧಾರಣೆಯಾಗಬೇಕಾದರೆ ನಮಗೆ ಇರತಕ್ಕಂಥ ವ್ಯವಸಾಯದ ಜಮೀನಿನಲ್ಲಿಯೇ ಹೆಚ್ಚು ಉತ್ಪಾದನೆ ಮಾಡತಕ್ಕಂಥ ಪ್ರಯತ್ನವನ್ನು ಮಾಡಬೇಕಾದ ಅಗತ್ಯ ಇದೆ. ಯಾವುದೇ ವ್ಯವಸಾಯಕ್ಕೆ ಸಂಬಂಧಪಟ್ಟಂಥ ಸಭೆಗಳಲ್ಲಿ ಅವಕಾಶ ಸಿಕ್ಕಿದಾಗ ಅದರ ಬಗ್ಗೆ ಮಾತನಾಡುವುದು ಮಾಡುತ್ತಿದ್ದರು. ಬಹುಶಃ ಇವತ್ತು ಕೂಡ ಅದು ಪ್ರಸ್ತುತ ಎಂದು ನನಗೆ ಅನಿಸುತ್ತದೆ. ನಮ್ಮ ದೇಶದಲ್ಲಿ ಆಹಾರದ ಉತ್ಪಾದನೆ ಹೆಚ್ಚು ಆಗಬೇಕಾದಂಥ ಅಗತ್ಯ ಇದೆ. ಇವತ್ತು ಇನ್ನೊಂದು ಹಸಿರು ಕ್ರಾಂತಿ ಆಗಬೇಕಾದಂಥ ಅಗತ್ಯ ಕೂಡ ಇದೆ. ಈ ದೇಶದಲ್ಲಿ 60ರ ದಶಕದಲ್ಲಿ ಹಸಿರು ಕ್ರಾಂತಿಯಾಯಿತು. ಶ್ರೀಮತಿ ಇಂದಿರಾಗಾಂಧಿಯವರು ಅಂದಿನ ಪ್ರಧಾನ ಮಂತ್ರಿಗಳಾಗಿದ್ದ ಕಾಲದಲ್ಲಿ ದೇಶದಲ್ಲಿ ಹಸಿರು ಕ್ರಾಂತಿಯಾಗಿ, ಒಂದು ಕಾಲದಲ್ಲಿ ನಾವು ವಿದೇಶಿಯರ ಮುಂದೆ ಆಹಾರಕ್ಕೋಸ್ಕರ ಬೇಡುತ್ತಿದ್ದ ಪರಿಸ್ಥಿತಿಯಲ್ಲಿ ಹಸಿರು ಕ್ರಾಂತಿ ಮಾಡಿ, ಆಹಾರದ ಉತ್ಪಾದನೆಯಲ್ಲಿ ಸ್ವಾವಲಂಬನೆಯನ್ನು ಮಾಡಿಕೊಳ್ಳತಕ್ಕಂಥ ಕೆಲಸವನ್ನೂ ಈ ದೇಶದಲ್ಲಿ ಮಾಡಿದರು. ಇವತ್ತು ಮತ್ತೆ ಕೃಷಿ ಕ್ಷೇತ್ರದಲ್ಲಿ ಆಹಾರದ ಉತ್ಪಾದನೆ ಸ್ಥಗಿತವಾಗಿದೆ. ಅನೇಕ ಕಡೆಗಳಲ್ಲಿ ಅದು ಕುಂಠತವಾಗಿದೆ. ಪ್ರತಿ ವರ್ಷ ಜನಸಂಖ್ಯೆ ಮಾತ್ರ ಎರಡು ಪರ್ಸೆಂಟ್ ಬೆಳೆಯುತ್ತಾ ಹೋಗುತ್ತಿರುತ್ತದೆ. ಆದರೆ, ಕೃಷಿ ಉತ್ಪಾದನೆ ಪ್ರತಿ ವರ್ಷ ಎರಡು ಪರ್ಸೆಂಟ್ ಬೆಳೆಯುತ್ತಿಲ್ಲ. ಜನಸಂಖ್ಯೆ ಬೆಳವಣಿಗೆಗೆ ಅನುಗುಣವಾಗಿ ಬೆಳವಣಿಗೆಯಾಗುತ್ತಿಲ್ಲ. ಆ ಕಾರಣದಿಂದ ಈ ದೇಶದಲ್ಲಿ ಮತ್ತೊಂದು ಹಸಿರು ಕ್ರಾಂತಿ ಅತ್ಯಂತ ಅಗತ್ಯವಾಗಿದೆ. ಇವರೆಲ್ಲಾ ಕೃಷಿ ಬಗ್ಗೆ, ಕೃಷಿ ಉತ್ಪಾದನೆ ಬಗ್ಗೆ ಯೋಚನೆ ಮಾಡುತ್ತಿದ್ದ ಒಬ್ಬ ಮುಖಂಡರಾಗಿದ್ದರು ಎಂದು ಈ ಸಂದರ್ಭದಲ್ಲಿ ನೆನಪಿಸಿಕೊಂಡು ಶ್ರೀ ಎನ್.ಎಸ್.ಗುರುಸಿದ್ದಪ್ಪನವರ ಆತ್ಮಕ್ಕೆ ಶಾಂತಿ ದೊರಕಲಿ, ಅವರ ಕುಟುಂಬ ವರ್ಗದವರಿಗೆ ಅವರ ಸಾವಿನ ದುಃಖವನ್ನು ಭರಿಸತಕ್ಕಂಥ ಶಕ್ತಿ ಬರಲಿ ಎಂದು ನಾನು ಈ ಸಂದರ್ಭದಲ್ಲಿ ಆಶಿಸುತ್ತೇನೆ.

ಹಾಗೆಯೇ, ಶ್ರೀ ಎನ್.ಕೈಲಾಸ್ ಅವರು ಮೇಲ್ಮನೆ ಸದಸ್ಯರಾಗಿದ್ದರು. ಬಹಳ ವರ್ಷಗಳ ಕಾಲ ಆರ್.ಎಸ್.ಎಸ್.ನಲ್ಲಿ ಕೆಲಸ ಮಾಡಿದಂಥವರು. ನಾವೆಲ್ಲಾ ಒಟ್ಟಿಗೆ ಜನತಾ ಪಾರ್ಟಿಯಲ್ಲಿದ್ದಾಗ ಅವರು ಬೆಂಗಳೂರು ಸಿಟಿಯಲ್ಲಿ ಜನತಾ ಪಾರ್ಟಿಯ ಪದಾಧಿಕಾರಿಯಾಗಿ ಕೆಲಸವನ್ನು ಕೂಡ ಮಾಡುತ್ತಿದ್ದರು. ಬಹಶಃ ಇವತ್ತು ಬೆಂಗಳೂರಿನಲ್ಲಿ ಬಿ.ಜೆ.ಪಿ. ಬೆಳೆದಿದ್ದರೆ, ಶ್ರೀ ಕೈಲಾಸ್ ಅವರು ಕೂಡ ಅದಕ್ಕೆ ಕಾರಣಕರ್ತರು ಎಂದು ಹೇಳಿದರೆ ಅದು ಅತಿಶಯೋಕ್ತಿ ಆಗಲಾರದು ಎಂದು ನಾನು ಅಂದುಕೊಂಡಿದ್ದೇನೆ. ನನಗೆ ತಿಳಿದ ಮಟ್ಟಿಗೆ He is a dedicated RSS worker. ಅವರು ಬಹಳ ದಿನಗಳ ನಂತರ ಎಂ.ಎಲ್.ಸಿ. ಆಗಿದ್ದರು, ಮೇಲ್ಮನೆಗೆ ಸದಸ್ಯರಾಗಿದ್ದರು. ಅನೇಕ ಹೋರಾಟಗಳಲ್ಲಿ ಭಾಗವಹಿಸಿದ್ದರು. ತುರ್ತು ಪರಿಸ್ಥಿತಿ ಕಾಲದಲ್ಲಿ ಜೈಲುವಾಸ ಅನುಭವಿಸಿದ್ದರು ಹಾಗೆಯೇ 'ಕಾಶ್ಮೀರ್ ಚಲೋ' ಎನ್ನುವ ಹೋರಾಟದಲ್ಲಿ ಭಾಗವಹಿಸಿದ್ದರು. ಹೀಗೆ ಅನೇಕ ಹೋರಾಟಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಇಡೀ ಜೀವನವನ್ನು ಸಾರ್ವಜನಿಕ ಬದುಕಿಗೆ, ಸಾರ್ವಜನಿಕ ಕ್ಷೇತ್ರಕ್ಕೆ ಮುಡುಪಾಗಿದ್ದಂಥ ಒಬ್ಬ ವ್ಯಕ್ತಿ ಇವತ್ತು ನಮ್ಮೊಡನೆ ಇಲ್ಲ ಎನ್ನುವುದು ಎಲ್ಲರಿಗೂ ದುಃಖದ ಸಂಗತಿ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಶ್ರೀ ಕೈಲಾಸ್ ಅವರು sitting member ಆಗಿದ್ದರು. ಅವರ ಆತ್ಮಕ್ಕೆ ಚಿರಶಾಂತಿ ದೊರಕಲಿ, ಅವರ ಹೋರಾಟ ಆದರ್ಶಗಳು ಬೇರೆಯವರಿಗೆ ಮಾರ್ಗದರ್ಶನವಾಗಲಿ ಎಂದು ಈ ಸಂದರ್ಭದಲ್ಲಿ ಹೇಳುತ್ತಾ, ಇವರ ಕುಟುಂಬ ವರ್ಗದವರಿಗೆ ಇವರ ಸಾವಿನ ದುಃಖವನ್ನು ಭರಿಸತಕ್ಕಂಥ ಶಕ್ತಿ ಕೊಡಲಿ ಎಂದು ಪ್ರಾರ್ಥಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಎಸ್. ಈಶ್ವರಪ್ಪ (ಇಂಧನ ಸಚಿವರು) : ಮಾನ್ಯ ಅಧ್ಯಕ್ಷರೆ, ಇವತ್ತು ತಾವೇನು ಸಂತಾಪ ಸೂಚನೆಯನ್ನು ಮಂಡನೆ ಮಾಡಿದ್ದೀರಿ, ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀಯುತ ಗುರುಸಿದ್ದಪ್ಪನವರು ಹಾಗೂ ವಿಧಾನ ಪರಿಷತ್ತಿನ ಹಾಲಿ ಸದಸ್ಯರಾದ ಎಸ್.ಕೈಲಾಸ್ ಅವರ ನಿಧನಕ್ಕೆ ವಿಷಾದವನ್ನು ವ್ಯಕ್ತಪಡಿಸುತ್ತಾ, ಮಾನ್ಯ ಗುರುಸಿದ್ದಪ್ಪನವರ ಬಗ್ಗೆ ನನಗೆ ಹೆಚ್ಚಿಗೆ ಗೊತ್ತಿಲ್ಲ. ನಮ್ಮ ಹಿರಿಯರು, ವಿರೋಧ ಪಕ್ಷದ ನಾಯಕರಾದ ಸನ್ಮಾನ್ಯ ಸಿದ್ದರಾಮಯ್ಯನವರು ಏನು ಹೇಳಿದ್ದಾರೆ ಅದನ್ನು ಕೇಳಿದ ನಂತರ ನನಗೂ ಕೂಡ ಅವರೊಬ್ಬ ರಾಷ್ಟ್ರಭಕ್ತರು, ದೇಶಕ್ಕೋಸ್ಕರ ಹೋರಾಟ ಮಾಡಿದಂಥ

ಒಬ್ಬ ವ್ಯಕ್ತಿ, ಪ್ರಗತಿಪರ ನೇತಾರರು ಎಂಬ ಅಂಶ ನನ್ನ ಗಮನಕ್ಕೆ ಬಂದಿದೆ. ನಿಜಕ್ಕೂ ಕೂಡ ಅವರು ಈ ಸದನದ ಗಮನಕ್ಕೆ ಅವರು ಬೆಳಕು ಚೆಲ್ಲಿರುವುದು ತುಂಬಾ ಸಂತೋಷ. ಅಂತಹ ವ್ಯಕ್ತಿಗಳ ಜೀವನ ನಮಗೆಲ್ಲರಿಗೂ ಕೂಡ ಮಾರ್ಗದರ್ಶನವಾಗಬೇಕಾಗಿದೆ. ಅಂತಹ ವ್ಯಕ್ತಿ ಇವತ್ತು ನಮ್ಮನ್ನು ಅಗಲಿರುವಂಥ ಸಂದರ್ಭದಲ್ಲಿ ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ, ಅವರ ಕುಟುಂಬಕ್ಕೂ ಕೂಡ ಸ್ವಲ್ಪ ಸಮಾಧಾನವಾಗಲಿ ಎನ್ನುವ ಹಾರೈಕೆಯನ್ನು ಭಗವಂತನಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀಯುತ ಎಸ್.ಕೈಲಾಸ್ ಅವರು ನನ್ನ ಆತ್ಮೀಯ ಸ್ನೇಹಿತರು. ಇವತ್ತು ಕೈಲಾಸ್ ಅವರು ಇಲ್ಲ ಎನ್ನುವ ಅಂಶವನ್ನು ನೆನಸಿಕೊಂಡರೆ ನಮಗೆಲ್ಲರಿಗೂ ಕೂಡ, ಇರುವ ಸ್ನೇಹತರಿಗೇ ಲಾಸ್, ನಮ್ಮ ಸಂಘಟನೆಗೂ ದೊಡ್ಡ ಲಾಸ್, ಈ ಸಮಾಜಕ್ಕೇ ಲಾಸ್, ಈ ದೇಶಕ್ಕೂ ಲಾಸ್, ಏಕೆಂದರೆ, ಯಾವುದೇ ಭಾಗದಲ್ಲಿ ನಮ್ಮ ಸಂಘಟನೆ ವಿಚಾರಗಳು ಬಂದಂಥ ಸಂದರ್ಭದಲ್ಲಿ ಅಲ್ಲಿ ಏನಾದರೂ ಸ್ವಲ್ಪ ಚಟುಚಟಿಕೆಗಳು ಮಾಡಬೇಕೆನ್ನುವ ಅಂಶ ಬಂದಾಗ ನಮ್ಮೆಲ್ಲರಿಗೂ ಆ ಒಂದು ಕಾರ್ಯವನ್ನು ನಿಭಾಯಿಸುವಂಥ ಶಕ್ತಿ ಕೈಲಾಸ್ ಅವರಿಗೆ ಇದೆ ಎಂದು, ಕೈಲಾಸ್ ಅವರು ನುಗ್ಗಿ ಹೋಗಿ ಮಾಡಿ ಯಶಸ್ವಿಯಾಗಿ ಬರುವಂಥ ಒಬ್ಬ ಪ್ರಾಮಾಣಿಕ ಕಾರ್ಯಕರ್ತ. ಹೋರಾಟ, ನಿಜಕ್ಕೂ ಕೂಡ ತುರ್ತುಪರಿಸ್ಥಿತಿಯ ವಿರುದ್ಧವಾಗಿ ಹೋರಾಟ ಮಾಡುವಂಥ ಸಂದರ್ಭದಲ್ಲಿ ಅವರು ಇಡೀ ಕರ್ನಾಟಕ ರಾಜ್ಯದಲ್ಲಿ ನುಗ್ಗಿ ಎಲ್ಲರಿಗೂ ಸ್ಫೂರ್ತಿ ಕೊಡುತ್ತಿದ್ದರು. ಅವರು ಸಭೆಗಳನ್ನು ಮಾಡುತ್ತಿದ್ದಂಥ ಸಂದರ್ಭದಲ್ಲಿ 'ಭಾರತ್ ಮಾತಾ ಕೀ ಜೈ', 'ವಂದೇ ಮಾತರಂ' ಘೋಷಣೆಯನ್ನು ಕೂಗಿ ಈ ದೇಶಕ್ಕೆ ಮತ್ತೊಮ್ಮೆ ಸ್ವಾತಂತ್ರ್ಯವನ್ನು ತರಬೇಕು ಎನ್ನುವ ಮಾತನ್ನು ಹೇಳುತ್ತಿದ್ದರು. ಯುವಕರೆಲ್ಲಾ ಜಾಗೃತರಾಗಬೇಕು, ಮಾನ್ಯ ಜಯಪ್ರಕಾಶ್ ನಾರಾಯಣ್ ಅವರ ನೇತೃತ್ವದಲ್ಲಿ ನಾವೆಲ್ಲಾ ಹೋರಾಟ ಮಾಡಬೇಕೆಂದು ಹೇಳಿ, ಜೈಲಿಗೂ ಕೂಡ ನಮ್ಮನ್ನೆಲ್ಲ ಕರೆದುಕೊಂಡು ಹೋದಂಥ ಒಬ್ಬ 'ಮಹಾ ಪುರುಷ' ಎಂದು ಹೇಳಿದರೆ ತಪ್ಪಾಗಲಾರದು. ಈ ಸಂಘಟನೆಯ ವಿಶೇಷ ವ್ಯಕ್ತಿ. ಇನ್ನೊಂದು ಅವರ ಜೀವನ, ಅವರ ಆದರ್ಶ ಹೇಗೆಂದರೆ, ಯಾವುದೇ ಒಂದು ಸ್ಥಾನಮಾನವನ್ನು ಅಪೇಕ್ಷೆ ಪಡೆಯದಂಥ ವ್ಯಕ್ತಿ. ಇಷ್ಟು ವರ್ಷ ಇಡೀ ಜೀವನ ಬ್ರಹ್ಮಚಾರಿಯಾಗಿದ್ದುಕೊಂಡು, ಮದುವೆಯಾಗದೆ ಇಡೀ ಸಂಸಾರ ಸಮಾಜ ಸೇವೆ ಮಾಡಬೇಕೆನ್ನುವ ತೀರ್ಮಾನ ಮಾಡಿದಂಥ ವ್ಯಕ್ತಿ ಒಂದು ಮುನಿಸಿಪಾಲ್ ಸೀಟ್ ಕೂಡ ನನಗೆ

ಬೇಕು ಎಂದು ಕೇಳಿದಂಥ ವ್ಯಕ್ತಿ ಅಲ್ಲ. ಪಕ್ಷವೇ ತೀರ್ಮಾನ ಮಾಡಿ, ನೀವು ವಿಧಾನ ಪರಿಷತ್ತಿನ ಸದಸ್ಯನಾಗಬೇಕೆಂದು ಸೂಚನೆ ಕೊಟ್ಟ ನಂತರ ವಿಧಾನ ಪರಿಷತ್ತಿನ ಸದಸ್ಯರಾಗಿ ಒಪ್ಪಿಕೊಂಡು ಕೆಲಸ ಮಾಡಿದಂಥ ಒಬ್ಬ ಆದರ್ಶ ವ್ಯಕ್ತಿ. ಅಂತಹ ಒಬ್ಬ ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ. ನಿಜಕ್ಕೂ ನಮಗೆ ಯಾವ್ಯಾವ ರೀತಿ ಲಾಸ್ ಆಗಿದೆ ಎನ್ನುವುದನ್ನು ನಾನು ಹೇಳಿದೆ. ಆ ಲಾಸ್ ಅನ್ನು ತುಂಬುವುದು ಹೇಗೆಂದರೆ, ಯಾವ ರೀತಿ ಕೈಲಾಸ್ ಅವರು ತಮ್ಮ ಆದರ್ಶವನ್ನು, ಸಿದ್ಧಾಂತವನ್ನು ಇಟ್ಟುಕೊಂಡು ತಮ್ಮ ಜೀವನವನ್ನು ಮುಂದುವರೆಸಿದರೋ, ಆ ಸಿದ್ಧಾಂತವನ್ನು, ಜೀವನವನ್ನು, ಆದರ್ಶವನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ಮಾತ್ರ ಕೈಲಾಸ್ ಅವರ ಆತ್ಮಕ್ಕೆ ಶಾಂತಿ ಸಿಗುತ್ತದೆ ಎಂದು ನನಗನ್ನಿಸುತ್ತದೆ. ಆ ದಿಕ್ಕಿನಲ್ಲಿ ಖಂಡಿತ ನಾವೆಲ್ಲಾ ಪ್ರಯತ್ನವನ್ನು ಮಾಡುತ್ತೇವೆ ಎನ್ನುವ ಅಂಶವನ್ನು ಇವತ್ತು ಸ್ವರ್ಗದಲ್ಲಿರುವ ಕೈಲಾಸ್ ಅವರಿಗೆ ತಿಳಿಸುತ್ತಾ. ಶ್ರೀಯುತ ಗುರುಸಿದ್ದಪ್ಪ ಮತ್ತು ಕೈಲಾಸ್ ಅವರ ಆತ್ಮಕ್ಕೆ ಶಾಂತಿ ಸಿಗಲಿ ಮತ್ತು ಅವರ ಕುಟುಂಬ ವರ್ಗದವರಿಗೆ ನೆಮ್ಮದಿ ಸಿಗಲಿ ಎಂದು ಭಗವಂತನದಲ್ಲಿ ಪ್ರಾರ್ಥನೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಗುಂಡ್ಲುಪೇಟೆ) : ಮಾನ್ಯ ಅಧ್ಯಕ್ಷರೆ, ನಿನ್ನೆ ಮತ್ತು ಇಂದು ನಿಧನರಾದಂಥ ಇಬ್ಬರು ಈ ಸದನದ ಮಾಜಿ ಸದಸ್ಯರು ಹಾಗೂ ಹಾಲಿ ಸದಸ್ಯರ ಬಗ್ಗೆ ತಂದಿರತಕ್ಕಂಥ ಸಂತಾಪ ಸೂಚನೆಗೆ ಬೆಂಬಲ ವ್ಯಕ್ತಪಡಿಸಿ, ಮಾಜಿ ಶಾಸಕರಾಗಿದ್ದಂಥ ಎನ್.ಎಸ್. ಗುರುಸಿದ್ದಪ್ಪ ನವರು ನಮ್ಮ ಮೈಸೂರು ಭಾಗದಲ್ಲಿ ಒಬ್ಬ ಹಳೆಯ ಹಿರಿಯ ಗಾಂಧೀವಾದಿ ಯಾಗಿದ್ದಂಥ ವ್ಯಕ್ತಿಗಳು, ಹಿಂದಿನ ಬಿಳಿಗೆರೆ ಕ್ಷೇತ್ರ, ಈಗಿನ ವರುಣಾ ಕ್ಷೇತ್ರಕ್ಕೆ ಸೇರಿದಂಥ ನಗರಲೆ ಗ್ರಾಮಕ್ಕೆ ಸೇರಿದಂಥ ಶ್ರೀ ಗುರುಸಿದ್ದಪ್ಪನವರು ಆ ಹಿಂದೆ 1972ರಲ್ಲಿ ಇದ್ದಂಥ ಬಿಳಿಗೆರೆ ಕ್ಷೇತ್ರದಿಂದ ಪಕ್ಷೇತರರಾಗಿ ಶಾಸನ ಸಭೆಗೆ ಆಯ್ಕೆಯಾದಂಥವರು. ಆಯ್ಕೆಯಾಗಿ ಸುಮಾರು ಆರು ವರ್ಷಗಳ ಕಾಲ ಅಂದಿನ ವಿಧಾನಸಭೆ ಸದಸ್ಯರಾಗಿದ್ದವರು ಅವರಿಗೆ ಒಂದು ವರ್ಷ ಹೆಚ್ಚು ಶಾಸನ ಸಭೆಯ ಸದಸ್ಯರಾಗಿ ಕೆಲಸ ಮಾಡುವಂಥ ಒಂದು ಅವಕಾಶ ಅಂದಿನ ಸಂದರ್ಭದಲ್ಲಿ ದೊರಕಿತ್ತು. ಅದಾದ ನಂತರ ಆ ಕ್ಷೇತ್ರ ಟಿ.ನರಸೀಪುರ ಕ್ಷೇತ್ರಕ್ಕೆ ಕ್ಷೇತ್ರ ಪುನರ್‌ವಿಂಗಡಣೆಯಲ್ಲಿ ಸೇರ್ಪಡೆಯಾದ ಮೇಲೆ ಅವರಿಗೆ ಸ್ಪರ್ಧೆ ಮಾಡುವಂಥ ಅವಕಾಶ ದೊರಕಲಿಲ್ಲ. ತದನಂತರ ದಿಂದ ಅವರು ಸ್ವಲ್ಪ ದಿನಗಳ ಕಾಲ ರಾಜಕೀಯದಿಂದ ದೂರವಿದ್ದು ಮತ್ತೆ

ಜನತಾ ದಳದ ಜಿಲ್ಲಾಧ್ಯಕ್ಷರಾಗಿ ಸುಮಾರು ವರ್ಷಗಳ ಕಾಲ ಮೈಸೂರು ಜಿಲ್ಲೆಯಲ್ಲಿ ಕೆಲಸ ಮಾಡಿದ್ದಾರೆ. ಒಬ್ಬ ಹಿರಿಯ ಗಾಂಧೀವಾದಿಯಾಗಿದ್ದು, ಸೌಮ್ಯ ಸ್ವಭಾವದ ವ್ಯಕ್ತಿಯಾಗಿದ್ದರು. ಯಾವತ್ತು ಕೂಡ ಅವರು ಪ್ರಾಮಾಣಿಕತೆ, ನಿಷ್ಠೆ ಮತ್ತು ಗ್ರಾಮೀಣಾಭಿವೃದ್ಧಿಯ ಬಗ್ಗೆ ವಿಶೇಷವಾದಂತಹ ಕಾಳಜಿಯನ್ನು ಹೊಂದಿದಂಥವರು. ಸ್ನೇಹಪರ ಜೀವಿಯಾಗಿದ್ದರು, ಯಾರೇ ವ್ಯಕ್ತಿ ಅವರು ಚಿಕ್ಕವರಿರಲಿ, ದೊಡ್ಡವರಿರಲಿ, ಅವರನ್ನು ಭೇಟಿಯಾದಂಥ ಸಂದರ್ಭದಲ್ಲಿ ಅವರಲ್ಲಿ ಒಬ್ಬರಾಗಿ ಅವರ ಜೊತೆ ಅನೇಕ ವಿಚಾರಗಳನ್ನು ಹಂಚಿಕೊಳ್ಳತಕ್ಕಂಥ ಒಂದು ಸ್ವಭಾವವನ್ನು ಹೊಂದಿದಂಥವರು. ಅವರು ರಾಜಕೀಯ ಕ್ಷೇತ್ರದಲ್ಲಿ ಇದ್ದರೂ ಇಲ್ಲದ ರೀತಿಯಲ್ಲಿ ತಮ್ಮ ನಡವಳಿಕೆಯನ್ನು ನಡೆಸಿಕೊಂಡು ಬಂದಂಥವರು. ನಿನ್ನೆ ಅವರು ಅಕಾಲಿಕ ಮರಣಕ್ಕೆ ತುತ್ತಾಗಿದ್ದಾರೆ. ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇನೆ. ಅದೇ ರೀತಿ ಮಾನ್ಯ ಕೈಲಾಸ್ ರವರು, ವಿಧಾನ ಪರಿಷತ್ತಿನ ಸದಸ್ಯರಾಗಿ ಇಂದು ನಿಧನರಾಗಿದ್ದಾರೆ. ಅವರ ಬಗ್ಗೆ ಕೂಡ ಮಾನ್ಯ ಸಭಾನಾಯಕರು ಮತ್ತು ವಿರೋಧ ಪಕ್ಷದ ನಾಯಕರು ಮಾತನಾಡಿದ ರೀತಿ, ಅವರು ಒಬ್ಬರು ಕಾರ್ಮಿಕ ನಾಯಕರಾಗಿ ಮತ್ತು ಆರ್.ಎಸ್.ಎಸ್.ನ ಕಟ್ಟಾ ಕಾರ್ಯಕರ್ತರಾಗಿ ಸೇವೆ ಮಾಡಿದಂಥವರು. ನಾನು 1994ರಲ್ಲಿ ಶಾಸಕನಾಗಿ ಬಂದಾಗಿನಿಂದಲೂ ಸುಮಾರು 10–12 ವರ್ಷಗಳ ಕಾಲ ನಿರಂತವಾಗಿ ವಿಧಾನ ಸಭೆಯ ಆವರಣದಲ್ಲಿ ಪ್ರತಿನಿತ್ಯ ಬೆಳಿಗ್ಗೆ ಅವರನ್ನು ಭೇಟಿಯಾಗತಕ್ಕ ಸಂದರ್ಭ ಬರುತ್ತಿತ್ತು. ಕೈಲಾಸ್‌ರವರು ಮತ್ತು ವಾಟಾಳ್ ನಾಗರಾಜ್‌ರವರು ಒಂದು ದಿವಸವೂ ತಪ್ಪದೆಯೇ ಪ್ರತಿನಿತ್ಯ ವಾಯುವಿಹಾರ ಮಾಡತಕ್ಕ ಸಂದರ್ಭದಲ್ಲಿ ನಾನು ಅನೇಕ ದಿವಸ ಅವರ ಜೊತೆ ವಾಯುವಿಹಾರದಲ್ಲಿ ಪಾಲುಗೊಳ್ಳತಕ್ಕ ಸಂದರ್ಭದಲ್ಲಿ ಅವರಲ್ಲಿದ್ದ ವಿಚಾರ ಮತ್ತು ಸ್ನೇಹಪರತೆ ವೈಯಕ್ತಿಕವಾಗಿ ನಮಗೆ ಆಕರ್ಷಣೆಗೆ ಒಳಪಡಿಸಿರತಕ್ಕದ್ದು. ಅವರು ಅನೇಕ ಹೋರಾಟಗಳನ್ನು ಮಾಡಿರತಕ್ಕವರು. ವಿಧಾನ ಪರಿಷತ್ತಿನ ಸದಸ್ಯರಾಗಿ ಯಾವುದೇ ಅಧಿಕಾರ, ಸ್ಥಾನಮಾನದ ಆಸೆ ಪಡದೆಯೇ ಅಚಲ ನಿಷ್ಠೆ, ಧ್ಯೇಯದೋರಣೆಗಳನ್ನು ಪ್ರತಿಪಾದಿಸಿಕೊಂಡು ಬಂದಿರತಕ್ಕಂಥ ವ್ಯಕ್ತಿ. ಅಂಥವರು ನಮ್ಮಲ್ಲಿ ಬಹಳ ವಿರಳ. ಇವತ್ತಿನ ರಾಜಕೀಯ ಕ್ಷೇತ್ರದಲ್ಲಿ ಸ್ಥಾನಮಾನಗಳಿಗಾಗಿ ಹೋರಾಟ ಮಾಡತಕ್ಕ ಸನ್ನಿವೇಶವನ್ನು ಪ್ರತಿನಿತ್ಯ ನೋಡುತ್ತಿರುವಾಗ, ಅಂಥದ್ದರಲ್ಲಿ ಪಕ್ಷಕ್ಕಾಗಿ, ನಾವು ನಂಬಿರುವಂಥ ತತ್ವಕ್ಕಾಗಿ ಸೀಮಿತವಾಗಿದ್ದೇವೆ, ಅದಕ್ಕಾಗಿ ಹೋರಾಟ ಮಾಡುತ್ತೇವೆ ಎನ್ನುವಂಥ ಕೆಲವೇ ಕೆಲವು ವಿರಳ ವ್ಯಕ್ತಿಗಳಲ್ಲಿ

ಮಾನ್ಯ ಕೈಲಾಸ್‌ರವರೂ ಕೂಡ ಒಬ್ಬರಾಗಿದ್ದರು. ಅವರು ನಮ್ಮನ್ನು ಇವತ್ತು ಅಗಲಿದ್ದಾರೆ. ಅವರಿಗೆ ಮತ್ತು ಮಾನ್ಯ ಗುರುಸಿದ್ದಪ್ಪನವರ ಆತ್ಮಕ್ಕೆ ಶಾಂತಿಯನ್ನು ಕೋರಿ ಈ ಸಂತಾಪ ನಿರ್ಣಯಕ್ಕೆ ನನ್ನ ಬೆಂಬಲವನ್ನು ಸೂಚಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕಟ್ಟಾಸುಬ್ರಹ್ಮಣ ನಾಯ್ಡು (ಅಬ್ಕಾರಿ ಮತ್ತು ವಾರ್ತಾ, ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಸಚಿವರು) : ಮಾನ್ಯ ಅಧ್ಯಕ್ಷರೆ, ವಿಧಾನ ಸಭೆಯ ಮಾಜಿ ಸದಸ್ಯರಾದ ಮಾನ್ಯ ಎನ್.ಎಸ್. ಗುರುಸಿದ್ದಪ್ಪನವರು ಮತ್ತು ವಿಧಾನ ಪರಿಷತ್ತಿನ ಸದಸ್ಯರಾದ ಮಾನ್ಯ ಎಸ್.ಕೈಲಾಸ್‌ರವರ ನಿಧನಕ್ಕೆ ತಾವು ಏನು ಸಂತಾಪ ಸೂಚನೆಯನ್ನು ತಂದಿದ್ದೀರಿ ಅದನ್ನು ಬೆಂಬಲಿಸುತ್ತಾ, ಮಾನ್ಯ ಕೈಲಾಸ್‌ರವರು ವಿಶೇಷವಾಗಿ ನಮ್ಮ ಪಕ್ಷದ ನಿಷ್ಠಾವಂತ ಕಾರ್ಯಕರ್ತರಾಗಿ ಕಳೆದ 25 ವರ್ಷಗಳಿಂದಲೂ ನಮ್ಮ ಜೊತೆಯಲ್ಲಿ, ಬೆಂಗಳೂರು ಜಿಲ್ಲೆಯಲ್ಲಿ, ಬೆಂಗಳೂರು ನಗರದಲ್ಲಿ, ಮಂಡ್ಯದಲ್ಲಿ, ವಿಶೇಷವಾಗಿ ದಕ್ಷಿಣ ಕರ್ನಾಟಕದಲ್ಲಿ ಹೆಚ್ಚು ಪ್ರವಾಸವನ್ನು ಮಾಡಿ, ನಮ್ಮ ಸಂಘಟನೆಗೆ ಶಕ್ತಿಯನ್ನು ತುಂಬಿದಂಥ ವ್ಯಕ್ತಿ. ಯಾವತ್ತೂ ಏನೂ ಅಪೇಕ್ಷೆ ಪಡದೆಯೇ ಇವತ್ತಿನ ತನಕ ಒಂದು ಸ್ವಂತ ಮನೆಯೂ ಇಲ್ಲದೆಯೆ ಇದ್ದರು. ಈಗ ಎಲ್ಲರೂ ಮನೆ, ಆಸ್ತಿಯನ್ನು ಮಾಡಿಕೊಳ್ಳುವುದು ಇದ್ದರೂ, ಮಾನ್ಯ ಕೈಲಾಸ್‌ರವರು ವಿಧಾನ ಪರಿಷತ್ತಿನಲ್ಲಿ ನೇಮಕಗೊಂಡ ನಂತರವೂ ಶಾಸಕರ ಭವನದಲ್ಲಿ ಕಳೆದ 25 ವರ್ಷಗಳಿಂದ ತಮ್ಮ ಜೀವನವನ್ನು ಸಾಗಿಸುತ್ತಿದ್ದರು. ಅವರು ಯಾವುದೇ ಸಣ್ಣ ಹೋರಾಟ ವಿದ್ದರೂ ಆ ಎಲ್ಲಾ ಹೋರಾಟದಲ್ಲಿ ಯುವ ಕಾರ್ಯಕರ್ತರಿಗೆ, ಎಲ್ಲರನ್ನು ಜೊತೆಗೂಡಿಸಿಕೊಂಡು ಸಂಘಟನೆಯನ್ನು ಬೆಳೆಸಿದಂಥ ವ್ಯಕ್ತಿ. ಅವರು ಇವತ್ತು ನಿಧನರಾಗಿರುವಂಥದ್ದು ನಿಜವಾಗಿಯೂ ನಮಗೆಲ್ಲಾ ದುಃಖ ತಂದಿದೆ. ನಮ್ಮ ಸಂಘಟನೆಗಳಿಗೆ ತುಂಬಲಾರದ ನಷ್ಟವಾಗಿದೆ. ಅವರು ಬೆಂಗಳೂರು ನಗರದಲ್ಲಿ ಓಡಾಡದಿರುವಂಥ ಸ್ಲಮ್‌ಗಳಿಲ್ಲ. ಅವರು ಓಡಾಡದಿರುವ ಪ್ರದೇಶದಲ್ಲ. ಆ ರೀತಿ ಬೆಂಗಳೂರು ನಗರದ ಎಲ್ಲ ಕಡೆ ಓಡಾಡಿ ಪಕ್ಷವನ್ನು ಬೆಳೆಸಿದಂಥ ಒಬ್ಬ ನಿಷ್ಠಾವಂತ ಕಾರ್ಯಕರ್ತರನ್ನು, ನಾಯಕರನ್ನು ನಾವು ಕಳೆದುಕೊಂಡಿದ್ದೇವೆ. ನಿಜವಾಗಿಯೂ ಅದು ನಮ್ಮ ಪಕ್ಷಕ್ಕೆ ತುಂಬಲಾರದಂಥ ನಷ್ಟ. ಇವರು ಕಾರ್ಮಿಕ ಮುಖಂಡರಾಗಿ ಆಟೋ ಚಾಲಕರ ಸಂಘವನ್ನು ಸ್ಥಾಪಿಸಿ ಅವರ ಪರವಾಗಿ ಹೋರಾಟವನ್ನು ಮಾಡಿ, ಕಾರ್ಮಿಕರನ್ನು ಒಗ್ಗೂಡಿಸಿ ಅವರಿಗೂ ಬೆಂಬಲಿಸಿ ಅವರ ಹಕ್ಕುಗಳಿಗಾಗಿ ಹೋರಾಟ ಮಾಡಿದಂಥ ವ್ಯಕ್ತಿ. ಅವರು ಇವತ್ತು ನಿಧನರಾಗಿರುವುದು ನಿಜವಾಗಿಯೂ

ಹಿಂದುಳಿದಿರುವಂಥ, ಬಡತನ ರೇಖೆಗಿಂತಾ ಕೆಳಗಿರುವ ಬಡವರ ಪರವಾಗಿ ಹೋರಾಟ ಮಾಡುತ್ತಿದ್ದ ವ್ಯಕ್ತಿಯೊಬ್ಬರನ್ನು ನಾವು ಕಳೆದುಕೊಂಡಿದ್ದೇವೆ. ಅವರು 61 ವರ್ಷ ವಯಸ್ಸಿನಲ್ಲಿ ನಿಧನರಾಗಿದ್ದರೂ ಕಳೆದ ಎರಡು ವರ್ಷಗಳ ಹಿಂದೆ ವಿಧಾನ ಪರಿಷತ್ತಿಗೆ ನೇಮಕವಾದರು. ಅಲ್ಲಿಯವರೆಗೆ ಅವರು ಯಾವುದೇ ಪದವಿಯನ್ನು, ಸ್ಥಾನಮಾನವನ್ನು ಕೇಳಿರಲಿಲ್ಲ. ಅಂಥ ವ್ಯಕ್ತಿಯನ್ನು ಕಳೆದುಕೊಂಡಿರುವುದು ನಿಜವಾಗಿಯೂ ಭಾರತೀಯ ಜನತಾ ಪಕ್ಷಕ್ಕೆ ತುಂಬಲಾರದಂಥ ನಷ್ಟವಾಗಿದೆ. ಬೆಂಗಳೂರಿನ ಬಡಜನರಿಗೂ ತುಂಬಲಾರದಂಥ ನಷ್ಟವಾಗಿದೆ. ಅವರ ಮತ್ತು ಮಾನ್ಯ ಗುರುಸಿದ್ದಪ್ಪನವರ ನಿಧನಕ್ಕೆ ನಾನೂ ಸಂತಾಪವನ್ನು ವ್ಯಕ್ತಪಡಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಾ.ರಾ. ಮಹೇಶ್ (ಕೆ.ಆರ್.ನಗರ) : ಮಾನ್ಯ ಅಧ್ಯಕ್ಷರೆ, ವಿಧಾನ ಸಭೆಯ ಮಾಜಿ ಸದಸ್ಯರಾದ ಮಾನ್ಯ ಎನ್.ಎಸ್. ಗುರುಸಿದ್ದಪ್ಪನವರು ಮತ್ತು ವಿಧಾನ ಪರಿಷತ್ತಿನ ಹಾಲಿ ಸದಸ್ಯರಾಗಿದ್ದಂಥ ಮಾನ್ಯ ಎಸ್.ಕೈಲಾಸ್ ಚಂದ್ ಜೈನ್‌ರವರು ನಿಧನರಾಗಿರುವ ಈ ಸಂದರ್ಭದಲ್ಲಿ ಸದನದ ಮೂಲಕ ವಿಷಾಧವನ್ನು ವ್ಯಕ್ತಪಡಿಸುತ್ತಿದ್ದೇವೆ. ಇವತ್ತಿನ ದಿವಸ ಏನು ಮಾನ್ಯ ಗುರುಸಿದ್ದಪ್ಪನವರು ಮತ್ತು ಮಾನ್ಯ ಕೈಲಾಸ್ ಚಂದ್ ಜೈನ್‌ರವರು ನಿಧನರಾಗಿದ್ದಾರೆ ಇವರಿಬ್ಬರೂ ಮೈಸೂರು ಜಿಲ್ಲೆಯವರು. ಮಾನ್ಯ ಕೈಲಾಸ್ ಚಂದ್ ಜೈನ್‌ರವರು ನಮ್ಮ ಕೃಷ್ಣರಾಜನಗರದವರು. ಹಿಂದೆ ಸುಮಾರು 18–20 ವರ್ಷಗಳ ಕಾಲ ಸನ್ಮಾನ್ಯರ ಜೊತೆ ನಾವು ಸಂಘಟನೆಯನ್ನು ಮಾಡುವಂಥ ಸಂದರ್ಭದಲ್ಲಿ ಅವರು ನಮ್ಮಂಥ ಅನೇಕ ಯುವಕರಿಗೆ ಮಾರ್ಗದರ್ಶನವನ್ನು ಮಾಡಿದ್ದರು. ಕೈಲಾಸ್ ಚಂದ್ ಜೈನ್‌ರವರು ಅಂದಿನ ಸಂಘಟನೆಯ ಸಂದರ್ಭದಲ್ಲಿ ಎಂದೂ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡುತ್ತಿರಲಿಲ್ಲ. ಯಾವುದೇ ಜಿಲ್ಲೆ, ತಾಲ್ಲೂಕಿಗೆ ಬಂದಂಥ ಸಂದರ್ಭದಲ್ಲಿ ಯಾವುದಾದರು ಒಬ್ಬರು ಕಾರ್ಯಕರ್ತರ ಮನೆಯಲ್ಲಿ ತಂಗಿದ್ದು ಅಂದಿನ ಅನೇಕ ಕಾರ್ಯಕರ್ತರಿಗೆ ಮಾರ್ಗದರ್ಶನವನ್ನು ಮಾಡುತ್ತಿದ್ದರು. ಇವತ್ತಿನ ದಿವಸದಲ್ಲಿ, ಇಂದಿನ ವ್ಯವಸ್ಥೆಯಲ್ಲಿ ಈ ಇಬ್ಬರೂ ನಾಯಕರು ನಮ್ಮಂಥ ರಾಜಕಾರಣಿಗಳಿಗೆ ಪಕ್ಷ ನಿಷ್ಠೆ ಎಂದರೆ ಏನು, ನಾಯಕರ ಜೊತೆಯಲ್ಲಿ, ಕಾರ್ಯಕರ್ತರ ಜೊತೆಯಲ್ಲಿ ಹೇಗೆ ಇರಬೇಕು ಎಂಬ ಬಗ್ಗೆ ಅನೇಕ ವಿಚಾರಗಳನ್ನು ಮಾರ್ಗದರ್ಶನ ಮಾಡುತ್ತಿದ್ದರು, ಮಾಡಿದ್ದರು. ಇವರಿಬ್ಬರ ನಿಧನದಿಂದ ರಾಜ್ಯಕ್ಕೆ ಏನು ನಷ್ಟವಾಗಿದೆ, ಬಹಳ ಮುಖ್ಯವಾಗಿ ಮೈಸೂರು

ಜಿಲ್ಲೆಗೆ ತುಂಬಾ ನಷ್ಟವಾಗಿದೆ. ಅಗಲಿರುವ ಈ ಇಬ್ಬರ ಕುಟುಂಬಕ್ಕೆ ಭಗವಂಥ ಶಾಂತಿಯನ್ನು ಕೊಟ್ಟು ಒಳ್ಳೆಯದನ್ನು ಮಾಡಲಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, ತಾವು ಮಂಡಿಸಿರುವ ಸಂತಾಪ ಸೂಚನೆಯನ್ನು ಬೆಂಬಲಿಸುತ್ತಾ, ಶ್ರೀಯುತ ಗುರುಸಿದ್ದಪ್ಪನವರು ಮತ್ತು ಕೈಲಾಸ್‌ರವರು ನಮ್ಮನ್ನು ಅಗಲಿ ಸ್ವರ್ಗಸ್ಥರಾಗಿದ್ದಾರೆ. ಅವರ ಆತ್ಮಕ್ಕೆ ಚಿರ ಶಾಂತಿಯನ್ನು ಕೋರುತ್ತಾ, ನಂಜನಗೂಡು ವಿಧಾನಸಭಾ ಕ್ಷೇತ್ರದಿಂದ ಗುರುಸಿದ್ದಪ್ಪನವರು ಮಾಡಿರುವಂಥ ಅನೇಕ ಜನಪರವಾದ ಕೆಲಸವನ್ನು ವಿರೋಧ ಪಕ್ಷದ ನಾಯಕರು ಮತ್ತು ಉಳಿದ ಸದಸ್ಯರುಗಳು ಉಲ್ಲೇಖಿಸಿದ್ದಾರೆ. ನಾವು ಅವರ ಅಪೇಕ್ಷೆಯನ್ನು ಈಡೇರುವ ದಿಕ್ಕಿನಲ್ಲಿ ನಮ್ಮ ಜವಾಬ್ದಾರಿಗಳನ್ನು ನಿರ್ವಹಿಸೋಣ ಎಂಬ ಮಾತನ್ನು ಹೇಳುತ್ತಾ, ಮಾನ್ಯ ಕೈಲಾಸ್‌ರವರು ನಮ್ಮ ಪಕ್ಷದಲ್ಲಿ ನಮ್ಮೆಲ್ಲರಿಗೂ ಆತ್ಮೀಯವಾಗಿದ್ದಂಥ ಸ್ನೇಹಿತರು. ಜನಸಂಘದ ಪ್ರಾರಂಭದಿಂದಲೂ ಅವರು ನಮ್ಮ ಪಕ್ಷದ ಕಾರ್ಯಕರ್ತರಾಗಿ ಕೆಲಸ ಕಾರ್ಯವನ್ನು ಮಾಡಿಕೊಂಡು ಬಂದಂಥವರು. ಇವತ್ತು ಎಲ್ಲಾ ಹಂತದಲ್ಲಿರುವಂಥವರಿಗೂ ಅವರು ಆತ್ಮೀಯವಾದ ಪರಿಚಯವನ್ನು ಹೊಂದಿದ್ದಂಥವರು. ರಾಷ್ಟ್ರೀಯ ಸ್ವಯಂ ಸೇವಕರ ಸಂಘದಲ್ಲಿ ಸ್ವಯಂ ಸೇವಕರಾಗಿ ಜನಸಂಘದಲ್ಲಿ ಕೆಲಸ ಮಾಡುತ್ತ, ಕಾರ್ಮಿಕ ಮುಖಂಡರಾಗಿ ಕೆಲಸ ಮಾಡಿರುವಂಥವರು. ನನಗೆ ಅವರ ಜೊತೆ ಬಹಳ ಆತ್ಮೀಯವಾದ ಒಡನಾಡ ಕಳೆದ 30 ವರ್ಷಕ್ಕಿಂತಾ ಹೆಚ್ಚು ವರ್ಷದಿಂದ ಇತ್ತು. ಅವರು ಕಾರ್ಮಿಕ ನಾಯಕರಾಗಿ ಸಂಘಟನೆಯನ್ನು ನಿಜವಾಗಿ ಹೇಗೆ ಮಾಡುತ್ತಿದ್ದರು ಎಂಬುದನ್ನು ಅನೇಕ ಉದಾಹರಣೆಗಳ ಮೂಲಕ ನಮ್ಮ ಸ್ನೇಹಿತರು ಹೇಳುತಿದ್ದರು. ಅವರು ಅವರ ಅನುಭವಗಳನ್ನು ಹಂಚಿಕೊಳ್ಳುತ್ತಿದ್ದರು. ಈ ರೀತಿ ನಾಯಕತ್ವವನ್ನು ಅವರ ಹುಟ್ಟುಗುಣವನ್ನಾಗಿ ಬೆಳೆಸಿಕೊಂಡಿದ್ದು ಉಳಿದವರಲ್ಲಿ ಆ ನಾಯಕತ್ವದ ಗುಣಗಳನ್ನು ಗುರುತಿಸಿ ಪ್ರೋತ್ಸಾಹಿಸತಕ್ಕ ಪ್ರಯತ್ನವನ್ನು ಮಾಡಿರುವಂಥವರು. ಅನೇಕ ಯುವಕರಿಗೆ ಇದರ ಬಗ್ಗೆ ಪ್ರೇರಣೆಯನ್ನು ಕೊಟ್ಟಿರುವಂಥವರು. ಭಾರತೀಯ ಜನತಾ ಪಕ್ಷದಲ್ಲಿ ಅವರು ರಾಜ್ಯ ವ್ಯಾಪಿಯಾಗಿ ಅನೇಕ ವಿಶೇಷ ಸಂದರ್ಭದಲ್ಲಿ ಪ್ರವಾಸ ಮಾಡಿ ಸಮಯ ಕೊಟ್ಟು ಕೆಲಸ ಕಾರ್ಯವನ್ನು ಮಾಡುತ್ತಿದ್ದಂಥವರು. ನಮ್ಮ ಪಕ್ಷದ ಕಾರ್ಯಕರ್ತರಿಗೆ ಅವರು ಸ್ಫೂರ್ತಿಯ ಸೆಲೆಯಾಗಿದ್ದರು. ಕಾರ್ಯಕರ್ತರಲ್ಲಿ

ಉತ್ಸಾಹವನ್ನು ತುಂಬಿ ಹುರಿದುಂಬಿಸುತ್ತಿದ್ದರು. ತಮ್ಮನ್ನು ತಾವೇ ತೊಡಗಿಸಿಕೊಂಡು ಕೆಲಸ ಕಾರ್ಯಗಳನ್ನು ಮಾಡುತ್ತಿದ್ದರು. ಈ ರೀತಿ ನಮ್ಮ ಸಂಘಟನೆ ಬೆಳೆಯುವುದಕ್ಕೆ ಎಲೆಮರೆಯ ಕಾಯಿಯಂತೆ ಇದ್ದು ಪಕ್ಷಕ್ಕೆ ಬಹಳ ಶಕ್ತಿಯನ್ನು ಕೊಟ್ಟಿರುವಂಥವರು. ಅವರ ಜೊತೆ ಕೆಲಸ ಮಾಡಿರುವ ಇನ್ನೂ ಅನೇಕ ಜನ ಒಡನಾಡಿಗಳು, ಸ್ನೇಹಿತರುಗಳು ಅವರ ಶಕ್ತಿ ಸಾಮರ್ಥ್ಯದ ಬಗ್ಗೆ ಹಂಚಿಕೊಂಡಿದ್ದಾರೆ. ಅವರನ್ನು ನಾವು ಇವತ್ತು ಕಳೆದುಕೊಳ್ಳುವುದರ ಮೂಲಕ ನಮ್ಮ ಪಕ್ಷಕ್ಕೆ, ವಿಧಾನ ಪರಿಷತ್ತಿಗೆ ಮತ್ತು ಸಮಾಜಕ್ಕೆ ತುಂಬಲಾರದ ಹಾನಿಯಾಗಿದೆ ಎಂಬ ಭಾವನೆಯನ್ನು ಈ ಸಂದರ್ಭದಲ್ಲಿ ವ್ಯಕ್ತಪಡಿಸುತ್ತೇನೆ.

ಅವರು ಕಳೆದ 40–50 ವರ್ಷಗಳಿಂದ ನಮ್ಮ ಈ ವಿಚಾರ ಧಾರೆಯನ್ನು ಬಲಪಡಿಸುವುದಕ್ಕೆ ಮಾಡಿರುವಂತಹ ಪ್ರಯತ್ನವನ್ನು ನಾವು ಮುಂದುವರೆಸುವವರಾಗೋಣ. ಈ ರೀತಿ ಅನೇಕರ ಶ್ರಮದಿಂದ ಇವತ್ತು ನಾವೆಲ್ಲರೂ ಈ ಸ್ಥಾನಮಾನಗಳನ್ನು ಗಳಿಸುವಂತಾಗಿದೆ, ಪಕ್ಷವನ್ನು ಬಲಿಷ್ಠ ಗೊಳಿಸಿ ಕಟ್ಟಿ ಬೆಳೆಸುವುದಕ್ಕೆ ಸಾಧ್ಯವಾಗಿದೆ. ಅವರು ನಮ್ಮನ್ನು ಅಗಲಿದಂತಹ ಈ ಸಂದರ್ಭದಲ್ಲಿ ಮುಂದಿನ ದಿನಗಳಲ್ಲೂ, ಆ ಗುರಿಯನ್ನು ತಲುಪುವುದಕ್ಕೆ ಬೇಕಾಗಿರುವಂತಹ ಸಂಕಲ್ಪವನ್ನು ಮಾಡೋಣ. ಮತ್ತೊಮ್ಮೆ ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಕರ್ನಾಟಕದ ಪ್ರಖ್ಯಾತ ಸುಗಮ ಸಂಗೀತ ದಿಗ್ಗಜ ಶ್ರೀ ಅಶ್ವತ್ಥ್‌ರವರು ನಿಧನ ಹೊಂದಿರುತ್ತಾರೆಂದು ಈಗ ತಾನೇ ಸುದ್ದಿ ಬಂದಿದೆ. ಅದನ್ನೂ ಕೂಡ ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸುತ್ತಿದ್ದೇನೆ.

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ) : ಮಾನ್ಯ ಅಧ್ಯಕ್ಷರೆ, ವಿಧಾನ ಸಭಾ ಸದಸ್ಯರಾಗಿದ್ದ ಶ್ರೀ ಎನ್.ಎಸ್. ಗುರುಸಿದ್ದಪ್ಪನವರು ಹಾಗೂ ವಿಧಾನ ಪರಿಷತ್ತಿನ ಸದಸ್ಯರಾಗಿದ್ದಂತಹ ಕೈಲಾಸ್ ನಿಧನರಾಗಿರುವುದಕ್ಕೆ ವಿಷಾದಿಸುತ್ತೇನೆ. ಮಾನ್ಯ ಗುರುಸಿದ್ದಪ್ಪನವರು 1934ನೇ ಫೆಬ್ರವರಿ 13ರಲ್ಲಿ ಜನಿಸಿ, ವಕೀಲರಾಗಿ, ಕೃಷಿಕರಾಗಿ ಮತ್ತು ತಾಂತ್ರಿಕ ಕ್ಷೇತ್ರದಲ್ಲಿ ಅನುಭವಸ್ಥ ರಾಗಿದ್ದು 5ನೇ ವಿಧಾನ ಸಭೆಯಲ್ಲಿ ಸೇವೆ ಸಲ್ಲಿಸಿ ದಿನಾಂಕ: 27.12.2009 ರಂದು ನಿಧನರಾಗಿದ್ದಾರೆ. ಅವರ ನಿಧನಕ್ಕೆ ಸಂತಾಪವನ್ನು ವ್ಯಕ್ತಪಡಿಸುತ್ತೇನೆ. ಹಾಲಿ ವಿಧಾನ ಪರಿಷತ್ತಿನ ಸದಸ್ಯರಾದಂತಹ ಕೈಲಾಸ್‌ರವರೂ ಸಹ ಇಂದು ಮುಂಜಾನೆ ನಿಧನರಾಗಿದ್ದಾರೆಂದು ತಿಳಿದು ವಿಷಾದವಾಯಿತು. ಅವರು 1975ರ ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ಸೆರೆಮನೆ

ವಾಸದಲ್ಲಿ ಇದ್ದವರು. ರಾಷ್ಟ್ರಮಟ್ಟದ ಹೋರಾಟಗಾರರಾಗಿದ್ದ ಅವರು 'ಕಾಶ್ಮೀರ ಚಲೋ ಕಾರ್ಯಕ್ರಮದ ಅಂಗವಾಗಿ ಜಮ್ಮು ಗಡಿ ಪ್ರದೇಶದ ಲಾಲ್‌ಚೌಕ್‌ನಲ್ಲಿ ರಾಷ್ಟ್ರ ಧ್ವಜ ಹಾರಿಸಲು ಹೊರಟಾಗ ದೋಡಾದಲ್ಲಿ ಬಂಧಿತರಾಗಿದ್ದರು. ಇವರ ನಿಧನಕ್ಕೂ ತೀವ್ರ ಸಂತಾಪ ವ್ಯಕ್ತಪಡಿಸುತ್ತೇನೆ. ನಮ್ಮ ಸಿ.ಅಶ್ವತ್ಥ್‌ರವರು ಇವತ್ತು ತೀರಿ ಹೋಗಿದ್ದಾರೆ, ಅವರಿಗೂ ಸಹ ನಾನು ಸಂತಾಪವನ್ನು ಸಲ್ಲಿಸುತ್ತೇನೆ. ಇವತ್ತಿನ ದಿವಸ ತಾವು ತಂದಿರುವ ಸಂತಾಪ ಸೂಚನಾ ನಿರ್ಣಯಕ್ಕೆ ಸಹಮತವನ್ನು ವ್ಯಕ್ತಪಡಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಕುಮಾರಿ ಶೋಭಾ ಕರಂದ್ಲಾಜೆ (ಯಶವಂತಪುರ) : ಮಾನ್ಯ ಅಧ್ಯಕ್ಷರೆ, ಮಾನ್ಯ ಕೈಲಾಸ್‌ರವರು ಇವತ್ತು ನಮ್ಮನ್ನು ಅಗಲಿದ್ದಾರೆ. ಕಳೆದ 14–15 ವರ್ಷಗಳಿಂದ ನಮ್ಮ ಮತ್ತು ಅವರ ಒಡನಾಟವಿತ್ತು. ಮಾನ್ಯ ಕೈಲಾಸ್‌ರವರು ಭಾರತೀಯ ಜನತಾ ಪಾರ್ಟಿಯ ಪೂರ್ಣಾವಧಿ ಕಾರ್ಯಕರ್ತರಾಗಿದ್ದರು. ತನ್ನ ಜೀವನಕ್ಕೆ ತಾನು ಏನೂ ಮಾಡಿಕೊಳ್ಳದೇ, ಪೂರ್ಣವಾಗಿ ತನ್ನ ಜೀವನವನ್ನು ನಮ್ಮ ಸಂಘಟನೆಗಾಗಿ ಮುಡಿಪಾಗಿಟ್ಟಂತಹ ವ್ಯಕ್ತಿಯಾಗಿದ್ದರು. ಮಾನ್ಯ ಕೈಲಾಸ್‌ರವರು ಹೊಸ ಕಾರ್ಯಕರ್ತರು ಮತ್ತು ಹಳೆದ ಕಾರ್ಯಕರ್ತರ ಮಧ್ಯೆ ಕೊಂಡಿಯಾಗಿದ್ದರು. ನಾನು ಯಾವಾಗಲೂ ಈ ಮಾತನ್ನು ಹೇಳುತ್ತಿರುತ್ತೇನೆ. ನಾವೆಲ್ಲರೂ ಹೊಸಬರು, ನಮಗೆ ಭಾರತೀಯ ಜನ ಸಂಘದಿಂದ ಇಲ್ಲಿಯ ತನಕ ಪಾರ್ಟಿಗೆ ದುಡಿದಿದ್ದ ಹಳಬರ ಬಗ್ಗೆ ಮಾಹಿತಿ ನಮಗೆ ಇರಲಿಲ್ಲ. ಯಾರು ಹೊಸದಾಗಿ ಪಾರ್ಟಿಗೆ ಸೇರಿದ್ದಾರೋ, ಅವರಿಗೆ ಮತ್ತು ಹಳೆಯ ಕಾರ್ಯಕರ್ತರ ನಡುವೆ ಕೊಂಡಿಯಾಗಿ ಅವರು ಕೆಲಸ ಮಾಡುತ್ತಿದ್ದರು. ನಮಗೆಲ್ಲರಿಗೂ ಹಳಬರನ್ನು ಪರಿಚಯ ಮಾಡಿಸುವಂತಹ ಮತ್ತು ಅವರಿಂದ ಪಕ್ಷಕ್ಕೆ ಆದಂತಹ ಕಾರ್ಯವನ್ನು ಪರಿಚಯ ಮಾಡುವಂತಹ ಕೆಲಸವನ್ನು ಕೈಲಾಸ್‌ರವರು ನಿರಂತರವಾಗಿ ಮಾಡುತ್ತಿದ್ದರು. ಸಹಜವಾಗಿ ಯಾವುದೇ ರಾಜಕೀಯ ಪಾರ್ಟಿಯಲ್ಲಿ ಪೂರ್ಣಾವಧಿಯಾಗಿ ಕೆಲಸ ಮಾಡುವುದು ಕಷ್ಟದ ಕೆಲಸ. ತನ್ನ ಜೀವನವನ್ನು ಪೂರ್ತಿಯಾಗಿ ಮುಡಿಪಾಗಿಡುವಂತಾದ್ದು, ರಾಜಕೀಯ ಪಾರ್ಟಿಯಲ್ಲಿ ಕೆಲಸ ಮಾಡುವಂತಾದ್ದು ಎಷ್ಟು ಕೆಲಸ ಎನ್ನುವುದು ನಮ್ಮೆಲ್ಲರ ಅನುಭವದಲ್ಲಿದೆ. ಇಂತಹ ಸಂದರ್ಭದಲ್ಲಿ ಭಾರತೀಯ ಜನಸಂಘದಿಂದ ಹಿಡಿದು, ಇಲ್ಲಿಯ ತನಕ ಈ ಪಕ್ಷವನ್ನು ಕಟ್ಟುವುದಕ್ಕಾಗಿ ಇಡೀ ರಾಜ್ಯದಲ್ಲಿ ಪ್ರವಾಸವನ್ನು ಮಾಡಿದ್ದರು. ಈ ರಾಜ್ಯದ ಎಲ್ಲಾ ಕಾರ್ಯಕರ್ತರು, ಹಳಬರು ಮತ್ತು ಹೊಸಬರು, ಅವರಿಗೆ

ಪರಿಚಿತರಾಗಿದ್ದರು. ಅವರು ಸಂಘಟನೆಯ ಕೆಲಸವನ್ನು ಚೆನ್ನಾಗಿ ಮಾಡುತ್ತಿದ್ದರು. ಅವರು ಬಹಳ ಉತ್ತಮ ವಾಗ್ಮಿಗಳಾಗಿದ್ದರು. ಆದರೆ ದುರದೃಷ್ಟವಶಾತ್ ವಿಧಾನ ಪರಿಷತ್ತಿನ ಸದಸ್ಯರಾಗಿ ತಮ್ಮ ವಾಗ್ಚತುರ್ಯವನ್ನು ನಮಗೆಲ್ಲಾ ತೋರಿಸಬೇಕಾಗಿದ್ದ ಸಂದರ್ಭದಲ್ಲೇ ಅವರು ಅಸ್ವಸ್ಥರಾದರು. ಬೇರೆ ಬೇರೆ ಕಾರಣಕ್ಕೆ ಅವರಿಗೆ ಮಾತನಾಡುವಂತಹ ಅವಕಾಶ ಕೂಡ ವಿಧಾನ ಪರಿಷತ್ತಿನಲ್ಲಿ ಸಿಗಲಿಲ್ಲ. ಅವರು ವಿಧಾನ ಪರಿಷತ್ತಿಗೆ ಬಂದರೆ ಅವರ ವಿದ್ವತ್ತಿನ ಪರಿಚಯ ಇಡೀ ವಿಧಾನ ಪರಿಷತ್ತಿಗೆ ಮತ್ತು ರಾಜ್ಯದ ಜನತೆಗೆ ಆಗುತ್ತದೆಂದು ನಾವು ಅಂದುಕೊಂಡಿದ್ದೆವು. ಆದರೆ ಕಳೆದ ಒಂದು ವರ್ಷದಿಂದ ಅವರ ಆರೋಗ್ಯ ತುಂಬಾ ಹದಗೆಟ್ಟಿತ್ತು. ಚಿಕಿತ್ಸೆಗಾಗಿ ಅವರು ಆಗಾಗ ಅವರು ಆಸ್ಪತ್ರೆಗೆ ಹೋಗುತ್ತಿದ್ದರು. ನಾವು ಇವತ್ತು ಮಾನ್ಯ ಸಚಿವರಾದ ರಾಮಚಂದ್ರೇಗೌಡರನ್ನು, ಈಗ ಅವರು ಮೇಲ್ಮನೆಯಲ್ಲಿ ಇದ್ದಾರೆ, ನೆನಪು ಮಾಡಿಕೊಳ್ಳಬೇಕು. ಮಾನ್ಯ ಕೈಲಾಸ್‌ರವರಿಗೆ ಸದಾ ಮಾನ್ಯ ರಾಮಚಂದ್ರೇಗೌಡರು ಸಹಕಾರವನ್ನು ಕೊಡುತ್ತಿದ್ದರು. ಪಕ್ಷದ ಪೂರ್ಣಾವಧಿ ಕಾರ್ಯಕರ್ತರಾಗಿದ್ದ ಅವರಿಗೆ ಸ್ವತಃ ದುಡಿಯಲಿಕ್ಕೆ ಏನೂ ಇರಲಿಲ್ಲ, ಜೀವನಕ್ಕೆ ಯಾವುದೇ ವ್ಯವಸ್ಥೆ ಇರಲಿಲ್ಲ. ಆದರೆ ಮಾನ್ಯ ರಾಮಚಂದ್ರೇಗೌಡರು ಸ್ವತಃ ತಮ್ಮ ಒಬ್ಬ ಮಗನನ್ನು ಸಾಕಿದಂತೆ ಅವರಿಗೆ ಎಲ್ಲಾ ಅವಶ್ಯಕತೆಗಳನ್ನು ಪೂರೈಸುವಂತಹ ಕೆಲಸವನ್ನೂ ಮಾಡುತ್ತಿದ್ದರು. ಇಂತಹ ಒಬ್ಬ ಹಳೆಯ ಕಾರ್ಯಕರ್ತರನ್ನು, ಹಳೆಯ ನಾಯಕರನ್ನು ನಾವು ಕಳೆದುಕೊಂಡಿದ್ದೇವೆ. ಅದರ ಜೊತೆಗೆ ಇವತ್ತು ಮತ್ತೊಂದು ಬಹಳ ನೋವಿನ ವಿಚಾರ ಬಂದಿದೆ. ಈಗಷ್ಟೇ ಅಶ್ವತ್‌ರವರು ನಮ್ಮನ್ನು ಅಗಲಿದ್ದಾರೆ ಎನ್ನುವಂತಹ ಮಾಹಿತಿ ಬಂದಿದೆ. ಅಶ್ವತ್‌ರವರು ಎಂತಹ ಒಬ್ಬ ಕಲಾವಿದ! ಈ ರಾಜ್ಯದ ಜನರನ್ನು ಸೆಳೆಯುವಂತಹ ಕಲೆ ಅವರಿಗೆ ಇತ್ತು. ಹಲವಾರು ಸಾರಿ ಅವರೊಂದಿಗೆ ನಾವು ಒಟ್ಟಿಗೆ ಕೆಲಸ ಮಾಡಿದ್ದೆವು. 'ನೇಗಿಲ ಯೋಗಿ' ಎಂಬ ರೈತ ಗೀತೆಯನ್ನು ಹಾಡುವಂತಹ ಸಂದರ್ಭದಲ್ಲಿ ಕಿರಿಯ ಕಲಾವಿದರಿಗೆ ಪ್ರೋತ್ಸಾಹ ಕೊಟ್ಟು, 'ಇದನ್ನು ನೀವೇ ಹಾಡಬೇಕು, ಇದು ಇಡೀ ರಾಜ್ಯದ ಗಮನ ಸೆಳೆಯುವಂತಹ ಮತ್ತು ರಾಜ್ಯದ ಜನ ಹಾಡುವಂತಹ ಹಾಡಾಗಿದೆ' ಎಂದು ಹೇಳುತ್ತಿದ್ದರು. ಆ ರೈತಗೀತೆಯ ಕ್ಯಾಸೆಟ್ಟನ್ನು ಮಾಡುವಂತಹ ಸಂದರ್ಭದಲ್ಲಿ ನಾನು ಅವರ ಜೊತೆಗಿದ್ದೆ. ಅವರು ಕಿರಿಯ ಕಲಾವಿದರನ್ನು ಹುರಿದುಂಬಿಸಿ, ಅವರಿಗೆ ಪ್ರೋತ್ಸಾಹ ಕೊಟ್ಟು ಅವರಿಂದ ಹಾಡಿಸುವಂತಹ ಅವರ ನೈಪುಣ್ಯತೆ ನಿಜವಾಗಿಯೂ ಆಶ್ಚರ್ಯ

ತರುತ್ತದೆ. ಸಾಮಾನ್ಯವಾಗಿ ಕಲಾವಿದರೆಂದರೆ, ಇನ್ನೊಬ್ಬ ಕಲಾವಿದರನ್ನು ಬೆಳೆಸುವುದಕ್ಕೆ ಇಷ್ಟಪಡುವುದಿಲ್ಲ, jealous ಇರುತ್ತದೆ. ಆದರೆ ಅವರು ಸ್ವತಃ ಕಿರಿಯ ಕಲಾವಿದರನ್ನು ಬೆಳೆಸಿ, ಅವರಿಂದ ಹಾಡನ್ನು ಹಾಡಿಸಿದರು. ಇವತ್ತು ರಾಜ್ಯದಲ್ಲಿ ಅದನ್ನು ನಾವು 'ರೈತ ಗೀತೆ'ಯಾಗಿ ಹಾಡುತ್ತಿದ್ದೇವೆ. ಆದರೆ ಈ ರೈತ ಗೀತೆಗೆ music comilation ಮಾಡಿದಂತಹ ಅಶ್ವತ್‌ರವರನ್ನು ನಾವು ಅಗಲಿದ್ದೇವೆ. ಮಾನ್ಯ ಕೈಲಾಸ್ ಮತ್ತು ಮಾನ್ಯ ಅಶ್ವತ್‌ರವರನ್ನು ಈ ನಾಡಿನ ಜನ ಖಂಡಿತವಾಗಿ ನೆನಪಿನಲ್ಲಿಟ್ಟುಕೊಳ್ಳುತ್ತಾರೆ. ಮುಖ್ಯವಾಗಿ ಮಾನ್ಯ ಕೈಲಾಸ್‌ರವರನ್ನು ನಮ್ಮ ಭಾರತೀಯ ಜನತಾ ಪಾರ್ಟಿ ಸದಾ ಕಾಲಕ್ಕೂ ನೆನಪಿನಲ್ಲಿಟ್ಟುಕೊಳ್ಳುತ್ತದೆ. ಅವರಿಗೆ ನಾವು ಸದಾ ಕಾಲ ನಮನಗಳನ್ನು ಸಲ್ಲಿಸಬೇಕಾಗುತ್ತದೆ. ಮಾನ್ಯ ಅಶ್ವತ್‌ರವರು ಮತ್ತು ಮಾನ್ಯ ಕೈಲಾಸ್‌ರವರ ಆತ್ಮಕ್ಕೆ ಶಾಂತಿಯನ್ನು ಕೋರಿ, ಮಾನ್ಯ ಅಧ್ಯಕ್ಷರು ತಂದಿರುವ ಸಂತಾಪ ಸೂಚನಾ ನಿರ್ಣಯವನ್ನು ಬೆಂಬಲಿಸುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಒಬ್ಬ ಖ್ಯಾತ ಫೋಟೋಗ್ರಾಫರ್ ಮೈಸೂರಿನ ಟಿ.ಎಸ್.ಸತ್ಯನ್‌ರವರೂ ಕೂಡ ನಿಧನರಾಗಿರುತ್ತಾರೆ. ಅದನ್ನೂ ಸದನದ ಗಮನಕ್ಕೆ ಅತ್ಯಂತ ವಿಷಾದದಿಂದ ತರುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಶ್ರೀ ಸಿ.ಅಶ್ವತ್‌ರವರು ಇವತ್ತು ಬೆಳಿಗ್ಗೆ ನಿಧನರಾಗಿದ್ದಾರೆ. ಅವರು ಒಬ್ಬ ದೊಡ್ಡ ಸಂಗೀತ ವಿದ್ವಾಂಸರಾಗಿದ್ದರು. ಕರ್ನಾಟಕದಲ್ಲಿ 'ಸುಗಮ ಸಂಗೀತಗಳ ಸಾರ್ವಭೌಮ' ಎಂದು ಅವರನ್ನು ಕರೆದರೆ ಅದು ಅತಿಶಯೋಕ್ತಿಯಾಗಲಾರದು. ಅವರು ಕರ್ನಾಟಕದ ಸಂಗೀತ ಕ್ಷೇತ್ರಕ್ಕೆ, ಸಂಗೀತ ಲೋಕಕ್ಕೆ ಅಪಾರವಾದಂತಹ ಕೊಡುಗೆಯನ್ನು ಕೊಟ್ಟಿದ್ದಾರೆ. ಈಗ ಕೆಲವು ದಿನಗಳ ಹಿಂದೆ ಮಾನ್ಯ ಮುಖ್ಯಮಂತ್ರಿಗಳು ಅವರ ಕೈಯಿಂದ 'ನೇಗಿಲ ಯೋಗಿ' ಎಂಬ ರೈತಗೀತೆಯನ್ನು ವಿಧಾನ ಸೌಧದ ಬ್ಯಾಕ್ವೆಂಟ್‌ಹಾಲ್‌ನಲ್ಲಿ ಹಾಡಿಸಿದ್ದರು. ಬಹುಶಃ ಇಷ್ಟು ಬೇಗ ಅವರು ನಮ್ಮನ್ನೆಲ್ಲಾ ಅಗಲುತ್ತಾರೆಂದು ಯಾರಿಗೂ ನಿರೀಕ್ಷೆ ಇರಲಿಲ್ಲ. ಅವರ ಮನೆಯವರಿಗೂ ಕೂಡ ನಿರೀಕ್ಷೆ ಇರಲಿಲ್ಲವೆನಿಸುತ್ತದೆ. 'ಸಾವು' ಮನುಷ್ಯನಿಗೆ ಯಾವಾಗಲಾದರೂ ಬಂದು ಬಿಡುತ್ತದೆ. ಆದರೂ ನಮ್ಮ ದುಶ್ಚಟಗಳನ್ನು, ದುಷ್ಕೃತ್ಯಗಳನ್ನು ನಾವು

ಬಿಡುವುದಿಲ್ಲ. 'ಸಾವು ಗ್ಯಾರಂಟಿ, ಹುಟ್ಟುವುದು ಆಕಸ್ಮಿಕ'. ದಿವಂಗತ ಅಶ್ವತ್ಥ್‌ರವರು ಅವರ ಬದುಕನ್ನು ಸಾರ್ಥಕ ಮಾಡಿಕೊಂಡಿದ್ದಾರೆ.

(12-00 PM)

ಒಬ್ಬ ಸಂಗೀತ ವಿದ್ವಾಂಸನಾಗಿ, ಈ ಸಮಾಜವನ್ನು ಅವರ ಸಂಗೀತದ ಮೂಲಕ, ನಗಿಸುವುದರ ಮೂಲಕ, ಖುಷಿಪಡಿಸುವುದರ ಮೂಲಕ, ಸಂತೋಷಪಡಿಸುವುದರ ಮೂಲಕ ಅಪಾರವಾದ ಸೇವೆಯನ್ನು ಸಂಗೀತ ಕ್ಷೇತ್ರದಲ್ಲಿ ಅವರು ಮಾಡಿದ್ದಾರೆ. ಅವರು ಇನ್ನು ಬಹಳ ವರ್ಷ ಇರಬೇಕಾಗಿತ್ತು ಎಂದು ನನಗನಿಸುತ್ತದೆ. ನಾನು ಅನೇಕ ಸಾರಿ ಅವರ ಸಂಗೀತ ಕಾರ್ಯಕ್ರಮಗಳಲ್ಲಿ ಭಾಗಿಯಾಗಿದ್ದೇನೆ, ಅವರ ಹಾಡುಗಳನ್ನು ಕೇಳಿದ್ದೇನೆ, ಬಹಳ ದೊಡ್ಡ ಧ್ವನಿಯಲ್ಲಿ ಹಾಡುಗಳನ್ನು ಹಾಡುತ್ತಿದ್ದರು, ಎತ್ತರದ ಧ್ವನಿಗಳಲ್ಲಿ ಹಾಡುತ್ತಿದ್ದರು. ಶಿಶುನಾಳ ಶರಿಫರ ಹಾಡುಗಳನ್ನು ಬಹಳ ಸುಶ್ರಾವ್ಯವಾಗಿ ಹಾಡುತ್ತಿದ್ದರು. ಅಂಥ ಅಶ್ವತ್ಥರಿಗೆ ಸರಿಸಾಟಿಯಾದಂಥ ಇನ್ನೊಬ್ಬ ಸುಗಮ ಸಂಗೀತಗಾರರನ್ನು ಮತ್ತೆ ನೋಡುವುದಕ್ಕೆ ಕಷ್ಟವಾಗಬಹುದೆಂದು ನನಗನಿಸುತ್ತದೆ, ಅಶ್ವತ್ಥರಿಗೆ ಅಶ್ವತ್ಥೇ ಸರಿಸಾಟಿ. ಕೆಲವು ಕ್ಷೇತ್ರಗಳಲ್ಲಿ ಬಹಳ ಎತ್ತರಕ್ಕೆ ಹೋಗುತ್ತಾರೆ, ಆ ಎತ್ತರಕ್ಕೆ ತಲುಪಿದ ಮೇಲೆ ಅವರಿಗೆ ಸರಿಸಾಟಿಯಾದವರು ಸಮಾಜದಲ್ಲಿ ಬರುವುದು ಭಾರಿ ಕಷ್ಟ. ಹಾಗಾಗಿ ಅಶ್ವತ್ಥರಿಗೆ ಸರಿಸಾಟಿಯಾದವರು ಯಾರು ಇಲ್ಲ, ಅವರಿಗೆ ಅವರೇ ಸರಿಸಾಟಿ. ಅಂಥ ಒಬ್ಬ ಸಂಗೀತಗಾರನನ್ನು ಇವತ್ತು ನಾವು ಕಳೆದುಕೊಂಡಿದ್ದೇವೆ. ಅವರು ಹೆಚ್ಚಾಗಿ ಸುಗಮ ಸಂಗೀತಗಳನ್ನು ಹಾಡುತ್ತಿದ್ದರೂ ಕೂಡ, ಶಿಶುನಾಳ ಶರಿಫರ ಹಾಡುಗಳನ್ನು ಹಾಡುತ್ತಿದ್ದರೂ ಕೂಡ ಬೇರೆ ಬೇರೆ ಸಂಗೀತದ ಸ್ತರಗಳಲ್ಲೂ ಕೂಡ ಅವರು ಜ್ಞಾನವನ್ನು ಪಡೆದುಕೊಂಡಿದ್ದರು. ಸಂಗೀತ ಕ್ಷೇತ್ರದಲ್ಲಿ ಇದ್ದಂಥ ಒಬ್ಬ ಪ್ರತಿಭಾವಂತ ಮೇರು ವ್ಯಕ್ತಿಯನ್ನು ಇವತ್ತು ನಾವೆಲ್ಲಾ ಕಳೆದುಕೊಂಡಿದ್ದೇವೆ. ಹಾಗಾಗಿ ಸಂಗೀತ ಕ್ಷೇತ್ರಕ್ಕೆ, ಸಂಗೀತ ಲೋಕಕ್ಕೆ ಅಪಾರವಾದ ನಷ್ಟವಾಗಿದೆ, ಇಡೀ ಸಂಗೀತ ಕ್ಷೇತ್ರಕ್ಕೆ ಅಲ್ಲ, ಇಡೀ ಸಮಾಜಕ್ಕೆ ಅವರ ಅಗಲಿಕೆಯಿಂದ ನಷ್ಟವಾಗಿದೆ. ಸಂಗೀತ ಪ್ರಿಯರಿಗೆ ಬಹಳ ನಷ್ಟವಾಗಿದೆ. ಆ ಕಾರಣದಿಂದ ಇಂಥ ವ್ಯಕ್ತಿ ಇವತ್ತು ನಮ್ಮನ್ನೆಲ್ಲಾ ಅಗಲಿರುವುದು ತುಂಬಲಾರದ ನಷ್ಟವೆಂದು ಈ ಸಂದರ್ಭದಲ್ಲಿ ನಾನು ಪ್ರಸ್ತಾಪಿಸಿ, ಅವರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹೇಳುತ್ತೇನೆ. ಅವರ ಕುಟುಂಬ ವರ್ಗದವರಿಗೂ ಕೂಡ ಅವರ ಸಾವಿರ ದುಃಖವನ್ನು ಭರಿಸತಕ್ಕಂಥ ಶಕ್ತಿಬರಲೆಂದು ಪ್ರಾರ್ಥನೆ ಮಾಡುತ್ತೇನೆ.

ಹಾಗೆ ಶ್ರೀ ಟಿ.ಎಸ್. ಸತ್ಯನ್ ಕೆಲವು ದಿವಸಗಳ ಹಿಂದೆ ಕಾಲವಾದರು, ನಮ್ಮನ್ನೆಲ್ಲಾ ಅಗಲಿದರು, ಅವರು ಒಬ್ಬ ಖ್ಯಾತ ಛಾಯಾಗ್ರಾಹಕರು. ಪತ್ರಿಕಾ ಕ್ಷೇತ್ರದಲ್ಲಿ ಬಹಳ ದೊಡ್ಡ ಹೆಸರನ್ನು ಮಾಡಿದಂಥ ವ್ಯಕ್ತಿ. ಇವತ್ತು ಟೆಕ್ನಾಲಜಿ ಬಹಳ ಡೆವೆಲಪ್ ಆಗಿದೆ, ಕಂಪ್ಯೂಟರ್ ಬಂದ ಮೇಲೆ information and technology ಬಂದ ಮೇಲೆ ಡಿಜಿಟಲ್ ಕ್ಯಾಮೆರಾ, ಆ ಕ್ಯಾಮೆರಾ, ಈ ಕ್ಯಾಮೆರಾಗಳೆಲ್ಲಾ ಡೆವೆಲಪ್ ಆಗಿದ್ದಾವೆ. ಅವೇನು ಇಲ್ಲದಿರುವ ಕಾಲದಲ್ಲಿ ಇವರು ಅತ್ಯಂತ ಶ್ರೇಷ್ಟ ಛಾಯಾಗ್ರಾಹಕರಾಗಿದ್ದರು. ಇವತ್ತು ಕೂಡ ಅವರ ಫೋಟೊಗ್ರಫಿ ಇದೆಯಲ್ಲಾ, ಬಹಳ ಮರೆಯಲಾರದಂಥ, ಇತಿಹಾಸದಲ್ಲಿ ವಸ್ತುಸಂಗ್ರಹ ಮಾಡಿ ಇಡತಕ್ಕಂಥ ಅಪರೂಪದ ಫೋಟೊಗ್ರಫಿಗಳನ್ನು ಅವರು ತೆಗೆದಿದ್ದಾರೆ. ಅಂಥ ಒಬ್ಬ ಛಾಯಾಗ್ರಹಕರು ಇವತ್ತು ನಮ್ಮನ್ನು ಅಗಲಿದ್ದಾರೆ. ಒಂದು ಫೋಟೊ ಎಂದರೆ, ಆ ಫೋಟೊ ಮೂಲಕ ಪದಗಳಲ್ಲಿ ಹೇಳುವುದನ್ನು ಹೇಳುತ್ತಿದ್ದರು, ಅದು ಎಲ್ಲರಿಗೂ ಬರುವುದಿಲ್ಲ. ಇಡೀ ಕತೆ, ಘಟನೆ ಇವುಗಳನ್ನೆಲ್ಲಾ ಫೋಟೊಗ್ರಾಫ್ ಮೂಲಕ ಹೇಳುವ ವಿಶೇಷವಾದ ಪ್ರತಿಭೆ ಇದೆಯಲ್ಲಾ, ಅದು ಎಲ್ಲರಿಗೂ ಬರುವುದಿಲ್ಲ. ಮೈಸೂರಿನಲ್ಲಿ ಪ್ರದರ್ಶನವಾದಾಗ ಅವರ ಅನೇಕ ಫೋಟೊಗ್ರಫಿಗಳನ್ನು ನಾನು ನೋಡಿದ್ದೇನೆ. ಅವುಗಳನ್ನು ನೋಡಿದಾಗ ಒಂದು ಕತೆ, ಒಂದು ಘಟನೆಯನ್ನು ಆ ಫೋಟೊಗ್ರಾಫ್‌ಗಳ ಮೂಲಕ ಜನರಿಗೆ, ಸಮಾಜಕ್ಕೆ ತಿಳಿಸತಕ್ಕಂಥ ಕೆಲಸವನ್ನು ಮಾಡುತ್ತಿದ್ದರು. ಅಂಥ ಒಬ್ಬ ಅದ್ವಿತೀಯ ಛಾಯಾಗ್ರಹಕರನ್ನು ನಾವು ಕಳೆದುಕೊಂಡಿದ್ದೇವೆ. ಬರೀ ಫೋಟೊಗ್ರಾಫ್ ಕ್ಷೇತ್ರಕ್ಕೆ ಅಷ್ಟೆ ಅಲ್ಲ, ಮಾಧ್ಯಮಕ್ಕೆ ಅಷ್ಟೇ ನಷ್ಟವಲ್ಲ, ಇಡೀ ಸಮಾಜಕ್ಕೆ ಅವರ ಅಗಲಿಕೆಯಿಂದ ನಷ್ಟವೆಂದು ಹೇಳುತ್ತೇನೆ. ಇವರೆಲ್ಲಾ ನಮ್ಮ ನಡುವಿನ ಪ್ರತಿಭಾವಂತ ವ್ಯಕ್ತಿಗಳು. ಇವರೆಲ್ಲಾ ಬೇರೆ ಯುವಕರಿಗೆಲ್ಲಾ ಮಾರ್ಗದರ್ಶಕರು. ಅವರ ಬದುಕಿನಲ್ಲಿ ಸಾಧನೆ ಮಾಡಿರುವ ಸಾಧನೆಗಳು ನಮಗೆಲ್ಲಾ ಮಾರ್ಗದರ್ಶನ, ಅವೆಲ್ಲವೂ ಕೂಡ, ವಿಶೇಷವಾಗಿ ಆ ಕ್ಷೇತ್ರದಲ್ಲಿ ಕೆಲಸ ಮಾಡುವ ಯುವಕರಿಗೆ, ಫೋಟೊಗ್ರಾಫಿ ಕ್ಷೇತ್ರದಲ್ಲಿ ಕೆಲಸ ಮಾಡುವಂಥ ವರಿಗೆ ವಿಶೇಷ ಚೇತನೆ, ಶಕ್ತಿಯನ್ನು ಕೊಡುವಂಥ, ಮಾರ್ಗದರ್ಶನ ಕೊಡತಕ್ಕಂಥ ವ್ಯಕ್ತಿಗಳಾಗಿದ್ದರು, ಅಂಥ ವ್ಯಕ್ತಿಯನ್ನು ಇವತ್ತು ನಾವು ಕಳೆದುಕೊಂಡಿದ್ದೇವೆ, ಅವರ ಆತ್ಮಕ್ಕೂ ಕೂಡ ಶಾಂತಿ ದೊರಕಲೆಂದು ನಾನು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡಿ ಈ ಸಂತಾಪ ಸೂಚಕ

ನಿರ್ಣಯಕ್ಕೆ ನನ್ನ ಬೆಂಬಲವನ್ನು ವ್ಯಕ್ತ ಪಡಿಸುವ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೆ, ಹೆಸರಾಂತ ಗಾಯಕರಾದ ಶ್ರೀ ಅಶ್ವತ್ಥರವರು ಕೆಲವು ನಿಮಿಷಗಳ ಮುಂಚೆ ನಮ್ಮನ್ನಗಲಿದ್ದಾರೆ. ಕನ್ನಡದ ಹೆಸರಾಂತ ಗಾಯಕರಾಗಿ, ಸಂಗೀತ ನಿರ್ದೇಶಕರಾಗಿ ಅಶ್ವತ್‌ರವರ ಹೆಸರನ್ನು ಕೇಳದಿರುವ ಕನ್ನಡಿಗರ್‍ಯಾರು ಇಲ್ಲವೆಂದು ನಾನು ಭಾವಿಸಿದ್ದೇನೆ. ಕನ್ನಡದ ಕವಿಗಳಾದ ಕುವೆಂಪು, ಅಡಿಗರು, ಬೇಂದ್ರೆ, ಜಿಎಸ್‌ಎಸ್ ಅವರುಗಳ ಗೀತೆಗಳನ್ನು ಮನೆ ಮನೆಗೆ ತಲುಪುವಂತೆ ಮಾಡಿದಂಥವರು ಮಾನ್ಯ ಅಶ್ವತ್‌ರವರು. ಇತ್ತೀಚೆಗೆ ನಮ್ಮ ಸರ್ಕಾರ ಕುವೆಂಪು ನೇಗಿಲ ಗೀತೆಯನ್ನು ಆಗಸ್ಟ್ 15ರಂದು ಪೆರೇಡ್ ಮೈದಾನದಲ್ಲಿ ಹಾಡಿಸಿದಾಗ, ಅವರು ಹಾಡಿದಂಥ ರೀತಿ, ಅದಾದ ನಂತರ ರಾಜ್ಯದ ಉದ್ದಗಲಕ್ಕೂ ಈ ನೇಗಿಲ ಗೀತೆಯನ್ನು ಹಾಡುವಂಥ ಸಂದರ್ಭದಲ್ಲಿ ಪ್ರತಿ ಕ್ಷಣಕ್ಕೆ ಅಶ್ವತ್‌ರವರ ನೆನಪು ನಮಗೆ ಕಾಣುತ್ತಿದೆ. ಮೊನ್ನೆ ತಾನೆ ಆಸ್ಪತ್ರೆಗೆ ಹೋಗಿ ಅವರ ಸ್ಥಿತಿಯನ್ನು ನೋಡಿ, ಅವರ ಆಸ್ಪತ್ರೆಯ ವೆಚ್ಚವನ್ನು ಸರ್ಕಾರ ಭರಿಸುತ್ತದೆಂದು ಮಾತನ್ನು ಕೊಟ್ಟು ಅವರ ಆರೋಗ್ಯ ಸುಧಾರಿಸುತ್ತದೆಂದು ನಂಬಿಕೊಂಡು ನಾನು ಬಂದವನು. ಇವತ್ತು ಅವರ 71ನೇ ಹುಟ್ಟುಹಬ್ಬದ ಸಂದರ್ಭ ಇಂದು ಅವರು ವಿಧಿವಶರಾಗಿರುವುದು ಒಂದು ವಿಪರ್ಯಾಸ. ಅವರು ಸುಗಮಸಂಗೀತಕ್ಕೆ ತಮ್ಮನ್ನು ತಾವು ಎಷ್ಟೊಂದು ಅರ್ಪಣೆ ಮಾಡಿಕೊಂಡಿದ್ದರೆಂದರೆ, ಕಾಯಿಲೆಯ ಸಂದರ್ಭ ದಲ್ಲೂ ಕೂಡ ಅವರು ಸುಗಮ ಸಂಗೀತವನ್ನು ಧ್ಯಾನ ಮಾಡುತ್ತಿದ್ದರು. ಡಿಸೆಂಬರ್ 27 ರಿಂದ 29ರವರೆಗೆ ಮೂರು ದಿವಸ ಸಂಗೀತೋತ್ಸವವನ್ನು ಆಯೋಜಿಸುವ ಕನಸನ್ನು ಅವರು ಕಾಣುತ್ತಿದ್ದರು. ಅವರು ಆಸ್ಪತ್ರೆ ಸೇರಿದ ಮೇಲೆ ಅದು ನನಸಾಗಲಿಲ್ಲ, ಅವರ ಜನ್ಮದಿನವಾದ ಇಂದು ಒಂದು ದಿವಸದ ಮಟ್ಟಿಗೆ ಸಂಗೀತ ಕಾರ್ಯಕ್ರಮವನ್ನು ರವೀಂದ್ರ ಕಲಾಕ್ಷೇತ್ರದಲ್ಲಿ ಅಶ್ವತ್ ಕನಸು ನನಸು ಕಾರ್ಯಕ್ರಮ ಏರ್ಪಡಿಸುವ ಆಶಯವನ್ನು ಅವರು ಕುಟುಂಬ ವರ್ಗದವರು, ಸ್ನೇಹಿತರು, ಅಭಿಮಾನಿಗಳು ಇಟ್ಟುಕೊಂಡಿದ್ದರು. ಇಂಥ ಒಂದು ಸಂದರ್ಭದಲ್ಲಿ ಅಶ್ವತ್‌ರವರು ನಮ್ಮನ್ನಗಲಿದ್ದಾರೆ. ಅವರು ಬಿಟ್ಟು ಹೋಗಿರುವ ಸಂಗೀತದ ಮೂಲಕ ಅಮರರಾಗಿದ್ದಾರೆಂದು ನಾನು ಭಾವಿಸುತ್ತೇನೆ. ಅವರ ಆತ್ಮಕ್ಕೆ ಶಾಂತಿ ಕೋರುತ್ತೇನೆ.

ಹಾಗೆ ಶ್ರೀ ಟಿ.ಎಸ್.ಸತ್ಯನ್, ದೇಶ ವಿದೇಶಗಳಲ್ಲಿ ಬಹಳ ಖ್ಯಾತಿಯನ್ನು ಪಡೆದಂಥ ಒಬ್ಬ ಒಳ್ಳೆಯ ಛಾಯಾಚಿತ್ರಗಾರ, ದೇಶವಿದೇಶ ಗಳಲ್ಲಿ ಅವರು ತೆಗೆದಂಥ ಛಾಯಾಚಿತ್ರಗಳು ಬಹಳ ದೊಡ್ಡ ಮನ್ನಣೆ, ಹೆಸರನ್ನು ಪಡೆದಿದ್ದಾವೆ, ಅವರೂ ಸಹ ಮೊನ್ನೆ ದೈವಾಧೀನರಾಗಿದ್ದಾರೆ, ಇವರ ಆತ್ಮಕ್ಕೂ ಶಾಂತಿಯನ್ನು ಕೋರಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ.ಎಸ್. ಪುಟ್ಟರಾಜು (ಮೇಲುಕೋಟೆ) : ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದಂಥ ಗುರುಸಿದ್ದಪ್ಪನವರ ಬಗ್ಗೆ, ವಿಧಾನ ಪರಿಷತ್ತಿನ ಹಾಲಿ ಸದಸ್ಯರಾದ ಕೈಲಾಶ್‌ರವರ ಬಗ್ಗೆ ಈ ಸದನದ ಹಿರಿಯ ಸದಸ್ಯರುಗಳು, ಅವರ ನಿಧನಕ್ಕೆ ಸಂತಾಪ ಸೂಚಿಸುವ ವಿಚಾರದ ಬಗ್ಗೆ ಈಗಾಗಲೆ ಮಾತನಾಡಿದ್ದಾರೆ. ವಿಶೇಷವಾಗಿ ಛಾಯಾಗ್ರಾಹ ಕರಾದ ಹಿರಿಯರಾದ ಸತ್ಯನ್‌ರವರ ಬಗ್ಗೆ ಸಹ ಮಾತನಾಡಿದ್ದಾರೆ. ವಿಶೇಷ ವಾಗಿ ಈಗ ಕೆಲವು ನಿಮಿಷಗಳ ಹಿಂದೆ ತಾವು ಈ ಸದನಕ್ಕೆ ತಿಳಿಸಿದಂತಹ ಶ್ರೀ ಅಶ್ವತ್ಥ್‌ರವರ ನಿಧನದಿಂದ ನನಗಂತೂ ವೈಯಕ್ತಿಕವಾಗಿ ಅವರ ಅಭಿಮಾನಿಯಾಗಿ ಬಹಳ ನೋವಾಗಿದೆ ಎನ್ನತಕ್ಕಂಥ ಮಾತನ್ನು ಈ ಸದನದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಕಾರಣ ಆದರೂ ಇಷ್ಟೆ. ನಾನು ನೂತನವಾಗಿ ಪಾಂಡವಪುರ ವಿಧಾನಸಭಾ ಕ್ಷೇತ್ರದಿಂದ ಸದಸ್ಯನಾಗಿ ಆಯ್ಕೆಯಾದಂತಹ ಸಂದರ್ಭದಲ್ಲಿ ನಮ್ಮ ಪಾಲಿಗೆ ಸುವರ್ಣ ಕರ್ನಾಟಕ ಆಚರಣೆ ಮಾಡುವಂತಹ ಸಂದರ್ಭ ಅದರಲ್ಲಿ ಅವರು ನನಗೆ ಒಬ್ಬ ಗುರುಗಳಾಗಿ ನವೆಂಬರ್ ತಿಂಗಳಲ್ಲಿ ಒಂದು ತಿಂಗಳ ಕಾಲ ಸುವರ್ಣ ಕರ್ನಾಟಕದ ರಾಜ್ಯೋತ್ಸವವನ್ನು ಆಚರಣೆ ಮಾಡಲಿಕ್ಕೆ ಒಂದು ದಿಕ್ಸೂಚಿಯನ್ನು ಹಾಕಿ ಕೊಟ್ಟರು. ಪಾಂಡವಪುರ ವಿಧಾನಸಭಾ ಕ್ಷೇತ್ರದ ಎಲ್ಲಾ ಹಳ್ಳಿಗಳಲ್ಲಿ ಒಂದು ತಿಂಗಳ ಕಾಲ ಕನ್ನಡ ಜಾತ್ರೆ ಎಂಬ ಹೆಸರಿನಲ್ಲಿ ಒಂದು ವಿನೂತನವಾದ ಕಾರ್ಯಕ್ರಮವನ್ನು ನಡೆಸಲಿಕ್ಕೆ ಮಾರ್ಗದರ್ಶಕರಾಗಿ ಹಾಗೂ ಗುರುಗಳಾಗಿ ಕೆಲಸ ಮಾಡಿದರು. ನಮ್ಮ ದುರ್ದೈವ ಇವತ್ತು ಅವರು ಅವರ 71ನೇ ಹುಟ್ಟು ಹಬ್ಬವನ್ನು ಆಚರಣೆ ಮಾಡುವಂತಹ ಸಂದರ್ಭ ಅವರ ಅಭಿಮಾನಿಗಳೆಲ್ಲಾ ಸೇರಿ ರವೀಂದ್ರ ಕಲಾ ಕ್ಷೇತ್ರದಲ್ಲಿ ಅವರ ಕನಸು ನನಸು ಎಂಬ ವಿಶೇಷವಾದ ಕಾರ್ಯಕ್ರಮವನ್ನು ಅವರ ಹೆಸರಿನಲ್ಲಿ ಮಾಡಬೇಕೆಂದು ಇಂದು ಸಾಯಂಕಾಲ 4 ಗಂಟೆಯಿಂದ 8 ಗಂಟೆಯವರೆಗೆ ಒಂದು ಕಾರ್ಯಕ್ರಮವನ್ನು ಆಯೋಜನೆ ಮಾಡಿದ್ದುದು ಒಂದು ಕಡೆ ಆದರೆ, ಇವತ್ತು ನೀವು ಸದನಕ್ಕೆ ಅವರ ಸಾವಿರ ಸುದ್ದಿ ತಿಳಿಸಿ, ನಿಜವಾಗಿಯೂ ನಮಗೆಲ್ಲರಿಗೂ

ದುಃಖದ ವಾತಾವರಣದಲ್ಲಿರುವಂತಹ ಒಂದು ಸ್ಥಿತಿಯಲ್ಲಿ ನಾವಿದ್ದೇವೆ. ಇಂತಹ ಸಂದರ್ಭದಲ್ಲಿ ಈ ರಾಜ್ಯದ ಮಾನ್ಯ ಮಂತ್ರಿಗಳು ಈಗಾಗಲೇ ಸದನಕ್ಕೆ ಹೇಳಿದ್ದಾರೆ. ಅವರು ಕಳೆದ 15–20 ದಿನಗಳಿಂದ ಏನು ಆಸ್ಪತ್ರೆಯಲ್ಲಿದ್ದಾರೆ, ಅದರ ಎಲ್ಲಾ ಖರ್ಚು ವೆಚ್ಚಗಳನ್ನು ಸರ್ಕಾರವೇ ಭರಿಸುತ್ತದೆ ಎನ್ನತಕ್ಕಂತಹ ಮಾತನ್ನು ಈಗಾಗಲೇ ಮಾತು ಕೊಟ್ಟು ಬಂದಿದ್ದೇನೆ ಎನ್ನತಕ್ಕಂತಹ ಮಾತನ್ನು ಈ ಸದನದಲ್ಲಿ ಹೇಳಿದ್ದಾರೆ. ಇಂತಹ ಸಂದರ್ಭದಲ್ಲಿ ಈ ರಾಜ್ಯ ಕಂಡಂತಹ ಸುಮಗ ಸಂಗೀತದ ದಿಗ್ಗಜ ಹಾಗೂ ಈ ಕ್ಷೇತ್ರದ ಮಹಾನ್ ನಾಯಕರನ್ನು ಸ್ಮರಿಸುವಂತಹ ಕೆಲಸ ಈ ಸರ್ಕಾರದಿಂದ ಮುಂದಿನ ದಿನಗಳಲ್ಲಿ ಆಗಲಿ ಎಂದು ಹೇಳಿ, ಈ ಸಂದರ್ಭದಲ್ಲಿ ಅವರ ಅಭಿಮಾನಿಯಾಗಿ ಈ ಸಭೆಯಲ್ಲಿ ನನ್ನ ಮಾತುಗಳನ್ನು ಹೇಳುತ್ತಾ, ನೀವು ಮಂಡಿಸಿರತಕ್ಕಂತಹ ಸಂತಾಪ ಸೂಚನಾ ನಿರ್ಣಯವನ್ನು ಬೆಂಬಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ನೆ.ಲ. ನರೇಂದ್ರ ಬಾಬು (ಮಹಾಲಕ್ಷ್ಮಿ ಲೇಔಟ್) : ಮಾನ್ಯ ಅಧ್ಯಕ್ಷರೆ, ಶ್ರೀ ಎನ್.ಎಸ್. ಗುರುಸಿದ್ದಪ್ಪರವರು, ಶ್ರೀ ಎಸ್. ಕೈಲಾಸ್‌ರವರು, ಶ್ರೀ ಟಿ.ಎನ್. ಸತ್ಯನ್‌ರವರು, ಹಾಗೂ ಶ್ರೀ ಟಿ.ಅಶ್ವತ್‌ರವರ ಅಗಲಿಕೆಯಿಂದ ಸಮಾಜದಲ್ಲಿ ತುಂಬಲಾರದ ನಷ್ಟವಾಗಿದೆ ಎಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ. ಡಿ.ವಿ.ಜಿ.ಯವರು ಹೇಳುವ ರೀತಿಯಲ್ಲಿ "ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆ ಆಗು, ಕಷ್ಟಗಳ ಮಳೆ ವಿಧಿ ಸುರಿಯೆ ಕಲ್ಲಾಗು, ಬೆಲ್ಲ ಸಕ್ಕರೆಯಾಗು, ದೀನದುರ್ಬಲರಿಗೆ ಎಲ್ಲರೊಳಗೊಂದಾಗು ಮಂಕುತಿಮ್ಮ" ಎನ್ನುವ ರೀತಿಯಲ್ಲಿ ಈ ನಾಲ್ಕು ಜನ ತಮ್ಮ ಜೀವಿತ ಅವಧಿಯಲ್ಲಿ ತಮ್ಮ ಬದುಕು ಸಾರ್ಥಕವಾಗುವ ರೀತಿಯಲ್ಲಿ ನಡೆಸಿ ಆದರ್ಶವಾಗಿ, ಇವತ್ತು ನಮ್ಮ ನೆನಪಿನಲ್ಲಿ ಉಳಿಯುವ ರೀತಿಯಲ್ಲಿ ತಮ್ಮ ಬದುಕನ್ನು ಸಾಗಿಸಿದ್ದಾರೆ. ವಿಶೇಷವಾಗಿ ಆಧುನಿಕ ತಂತ್ರಜ್ಞಾನವನ್ನು ಕೃಷಿ ಕ್ಷೇತ್ರದಲ್ಲಿ ತರುವ ದಿಕ್ಕಿನಲ್ಲಿ ತಮ್ಮ ಜೀವಿತಾವಧಿಯಲ್ಲಿ ಹೋರಾಟ ಮಾಡುತ್ತಾ, ಶಾಸಕರಾಗಿ ಅವರು ಸೇವೆ ಮಾಡಿದಂತಹ ಪುಸ್ತಕದಲ್ಲಿ ಓದಿದ್ದೇವೆ. ಇವತ್ತು ಬೆಳಗಿನಜಾವ ಏನು ಶ್ರೀ ಎಸ್.ಕೈಲಾಸ್‌ರವರು ಅಗಲಿದ್ದಾರೆ, ಅವರ ಜೊತೆ ಸುಮಾರು 20 ರಿಂದ 25 ವರ್ಷಗಳ ಪರಿಚಯ ನನಗೆ ಇದೆ. ಟಿ.ಆರ್.ಶಾಮಣ್ಣರವರು, ವಿ.ಎಸ್. ಕೃಷ್ಣಯ್ಯರವರು ಮತ್ತು BJP ಯ ಉಪಾಧ್ಯಕ್ಷರಾಗಿದ್ದಂತಹ ಕೊಳ್ಳೇಗಾಲದಲ್ಲಿದ್ದಂತಹ ಇ.ನ. ಶ್ರೀನಿವಾಸರಾಯರ ಮುಖೇನ ನನಗೆ ಅವರ ಪರಿಚಯವಾಯಿತು. ಅವತ್ತಿನ

ಪರಿಚಯ ನಾನು ಬೆಂಗಳೂರಿಗೆ ಬಂದ ಮೇಲೂ ಆ ಪರಿಚಯ ಮುಂದುವರೆಯಿತು. ರಾಜಕೀಯ ಸನ್ಯಾಸಿಯಂತೆ ಒಬ್ಬ ಸಂತನಂತೆ ಯಾವುದೇ ಅಧಿಕಾರವನ್ನು ಬಯಸದೆ, ಕೈಲಾಸ್‌ರವರು ನಿರಂತರವಾಗಿ ಬಡವರ ಬಗ್ಗೆ ಚಿಂತನೆ ಮಾಡುತ್ತಿದ್ದ ಒಬ್ಬ ಧೀಮಂತ ಹೋರಾಟಗಾರ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. MEI ಕಾರ್ಖಾನೆಯಲ್ಲಿ ಒಬ್ಬ ಕಾರ್ಮಿಕ ಮುಖಂಡರಾಗಿ ಅಸಂಘಟಿತ ಕಾರ್ಮಿಕರ ಬಗ್ಗೆ ಸದಾ ಮೇಲುಕನ್ನು ಹಾಕುತ್ತಾ ಅವರ ಬಗ್ಗೆ ಚಿಂತನೆ ಮಾಡುತ್ತಾ, ಬೆಂಗಳೂರು ನಗರದಲ್ಲಿ ಜನ ಸಾಮಾನ್ಯರ ನಾಡಿ ಮಿಡಿತವನ್ನು ಅರಿತಂತಹ ನಾಯಕರಲ್ಲಿ ಶ್ರೀ ಕೈಲಾಸ್‌ರವರು ಇದ್ದರು ಎನ್ನತಕ್ಕಂಥನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಇಂತಹ ಒಬ ನಾಯಕ ವಿಧಾನ ಪರಿಷತ್ತಿಗೆ ಆಯ್ಕೆಯಾದಾಗ ನಾನು ಅಂದುಕೊಂಡೆ, ಅವರಾಗಿ ಅವರು ಮುಂದೆ ಹೋಗಿದ್ದಾರೆ ಒಬ್ಬ ಮಂತ್ರಿಯೇ ಆಗಬಹುದಿತ್ತು. ಆ ರೀತಿಯಾದ ಸೇವೆಯನ್ನು ಅವರ ಪಕ್ಷಕ್ಕೆ ಕೊಟ್ಟಿದ್ದಾರೆ. ಆದರೂ ಅವರು ಯಾವತ್ತೂ ಅಧಿಕಾರವನ್ನು ಬಯಸಲಿಲ್ಲ. ಆದರೆ ವಿಧಿ ಇವತ್ತು ಅವರು ಧ್ವನಿ ಎತ್ತುವ ಮುಂಚೆ ಕಾಲವಶವಾಗಿ ಹೋದರು. ಆದರೂ ಸಹ ಅವರ ಹೋರಾಟ ಮತ್ತು ಅವರು ನಡೆದಂತಹ ಜೀವನ ಮತ್ತು ನೇರವಾಗಿ ಮಾತನಾಡುವವರು, ಮಾನ್ಯ ರಾಮಚಂದ್ರೇಗೌಡರ ಜೊತೆ ಸದಾ ಇರುತ್ತಿದ್ದವರು ಬಹುಶಃ ಅವರು ಇವತ್ತು ಕಾಲವಾಗಿದ್ದರೂ ಸಹ ನೆನಪಿನಲ್ಲಿ ಉಳಿಯುತ್ತಾರೆ. ಪಕ್ಷದ ಎಲ್ಲಾ ಕಾರ್ಯಕರ್ತರ ಜೊತೆಯಲ್ಲಿ ಬೆರೆಯುವಂತಹ ಗುಣ ಇದ್ದಂತಹ ಒಬ್ಬ ವ್ಯಕ್ತಿ. ನಾವು ಸತ್ಯನ್‌ರವರ ಚಿತ್ರಗಳನ್ನು ನೋಡುತ್ತಿದ್ದರೆ, ಕೆಲವು ಚಿತ್ರಗಳು ಮಾತನಾಡುತ್ತಿವೆ. ಕೆಲವು ಚಿತ್ರಗಳು ಮಾತನಾಡಿಸುತ್ತವೆ. ಅವರು ಆ ಅವ್ಯೆಲಬಲ್ ಲೈಟಿಂಗ್‌ನಲ್ಲಿ ತೆಗೆಯುತ್ತಿದ್ದ ಫೋಟೊಗ್ರಫಿ ತುಂಬಾ ಅದ್ಭುತವಾಗಿತ್ತು. ಮೊನ್ನೆ ಒಂದು ಮ್ಯಾಗಜಿನ್‌ನಲ್ಲಿ ಬಂದಿತ್ತು. ಬಹಳ ಹಿಂದೆ ಮ್ಯಾನುಯಲ್ ಫೋಟೊಗ್ರಫಿ ಇದ್ದಂತಹ ಕಾಲದಲ್ಲಿಯೇ ಅವರು ಅವರ ಛಾಯಾಗ್ರಹಣದಲ್ಲಿ ಜೀವವನ್ನು ತುಂಬುತ್ತಿದ್ದರು ಎಂಬುದನ್ನು ಸ್ಮರಣೆ ಮಾಡಿಕೊಳ್ಳುತ್ತಾ, ನಮ್ಮ ಡಾ:ಸಿ. ಅಶ್ವತ್ಥ್‌ರವರು ಅಂತಹ ಗಾಯಕರನ್ನು ಕಾಣುವುದು ನಮಗೆ ಮತ್ತೆ ಕಷ್ಟಸಾಧ್ಯವಾಗುತ್ತದೆ. ಅವರೇ ಒಂದು ಕಡೆ ಮಯೂರ ಪತ್ರಿಕೆಯಲ್ಲಿ ಹೇಳುತ್ತಿರುವಾಗ ನಾನು ಒಬ್ಬ ಹಿಂದೂಸ್ಥಾನಿ ಗಾಯಕ ಆಗಬೇಕಾಗಿತ್ತು, ಆದರೆ ಆಗಲಿಲ್ಲ. ಸಾಮಾನ್ಯವಾದ ಸುಗಮ ಸಂಗೀತದಲ್ಲಿ ನಾನು ತೊಡಗಿಸಿಕೊಂಡೆ ಎನ್ನುವುದನ್ನು ಅವರು ಹೇಳುತ್ತಾ, ಸುಮಾರು 780 ರಾಗ ಸಂಯೋಜನೆಗಳನ್ನು ಮಾಡಿದಂತಹವರು.

ನಾನು ಇತ್ತೀಚೆಗೆ ಒಂದು ಧ್ವನಿ ಸುರಳಿಯನ್ನು ಮಾಡಿದಾಗ ಅವರ ಕೈಯಲ್ಲಿ ಹಾಡಬೇಕೆಂದು ಬಹಳ ಬಯಸಿ ಅವರನ್ನು ಆಸ್ಪತ್ರೆಯಲ್ಲಿ ಕಂಡಾಗ ನಾನು ಆಸ್ಪತ್ರೆಯಿಂದ ಬಂದರೆ ನಾನು ಹಾಡುತ್ತೇನೆ ಎನ್ನತಕ್ಕಂತಹ ಮಾತನ್ನು ಹೇಳಿದರು. ಆದರೆ ಅವರ ಜೊತೆ ಹಾಡಿಸಲಿಕ್ಕೆ ಆಗಲಿಲ್ಲ. ನಿಜವಾಗಿಯೂ ಹೇಳುತ್ತೇನೆ, ಅವರು ಕನ್ನಡವೇ ಸತ್ಯ ಎನ್ನತಕ್ಕಂತಹ ಒಂದು ಕಾರ್ಯ ಕ್ರಮವನ್ನು ಮಾಡಿ, ಬೆಂಗಳೂರಿನ ಅರಮನೆ ಮೈದಾನದಲ್ಲಿ ಅಷ್ಟು ಜನ ಸೇರುವಂತಹ ಒಂದು ಇತಿಹಾಸವನ್ನು ಸೃಷ್ಟಿ ಮಾಡಿದಂತಹವರು ಶ್ರೀ ಸಿ.ಅಶ್ವತ್ಥ್‌ರವರು. ಕನ್ನಡವೇ ಸತ್ಯ ಎಂದು ಬಂದಾಗ ನಮ್ಮ ರಾಕ್‌ಶೋಗಳಲ್ಲಿ ಅಥವಾ ಯಾವುದೋ ಬೇರೆ ಬೇರೆ ಶೋಗಳಲ್ಲಿ ಜನ ಸೇರುತ್ತಿದ್ದರು. ಆದರೆ ಕನ್ನಡವೇ ಸತ್ಯ ಎನ್ನತಕ್ಕಂತಹ ಕಾರ್ಯಕ್ರಮ ಮಾಡಿ ಕನ್ನಡ ಹಾಡುಗಳಿಗೂ, ಸುಗಮ ಸಂಗೀತಕ್ಕೂ ಭಾವ ಗೀತೆಗಳಿಗೂ, ಅಷ್ಟು ಜನ ಸೇರಲಿಕ್ಕೆ ಸಾಧ್ಯವೆಂದು ಸಾಬೀತು ಮಾಡಿದವರು ಅಶ್ವತ್ಥ್‌ರವರು. ಜನಪದ ಗೀತೆಗಳನ್ನು ಹಾಡುವಾಗ ಅವರು ಎಷ್ಟು ಭಾವಪರವಶವಾ ಗುತ್ತಿದ್ದರು ಎಂದರೆ, ಪರಕಾಯ ಪ್ರವೇಶ, ಮಾಡಿ ಬಿಡುತ್ತಿದ್ದರು. ಶಿಶುನಾಳ ಶರೀಫರ ಗೀತೆಯನ್ನು ಹಾಡುವ ಸಂದರ್ಭದಲ್ಲಿಯೂ ಎಲ್ಲಾ ವರ್ಗದ ಜನ ಜಾತಿ, ಭಾಷೆ, ಧರ್ಮವನ್ನು ಮೀರಿ, ಅವರ ಗಾಯನಕ್ಕನ್ನು ಎಂಜಾಯ್ ಮಾಡುತ್ತಿದ್ದ ಒಬ್ಬ ಮಹಾನ್ ಗಾಯಕನನ್ನು ನಾವು ಕಳೆದುಕೊಂಡಿದ್ದೇವೆ. ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ, ಪುತಿನರವರು ಹೇಳುತ್ತಿದ್ದರು, ಮಾಡುವವನದಲ್ಲ ಹಾಡು, ಹಾಡುವವನದು ಹಾಡು ಎನ್ನುವ ರೀತಿಯಲ್ಲಿ ಹೇಳುತ್ತಿದ್ದರು. ಅಷ್ಟು ಜೀವ ಕಳೆ ತುಂಬುತ್ತಿದ್ದಂತಹ ಮಾನ್ಯ ಅಶ್ವತ್ಥ್‌ರವರನ್ನು ಇವತ್ತು ನಾವು ಕಳೆದುಕೊಂಡಿದ್ದೇವೆ. ಈ ಮಹಾನ್ ನಾಯಕರನ್ನು ಸ್ಮರಣೆ ಮಾಡಿಕೊಳ್ಳುತ್ತಾ, ಅವರ ಆತ್ಮಕ್ಕೆ ಚಿರ ಶಾಂತಿಯನ್ನು ಬಯಸಿ ಇವತ್ತು ತಂದಿರತಕ್ಕಂತಹ ಸಂತಾಪ ಸೂಚನೆಗೆ ಬೆಂಬಲವನ್ನು ವ್ಯಕ್ತಪಡಿಸುತ್ತೇನೆ.

ಶ್ರೀ ಎಂ.ಸಿ. ಸುಧಾಕರ್ : ಮಾನ್ಯ ಅಧ್ಯಕ್ಷರೆ, ಇವತ್ತು ತಾವು ಏನು ಸಂತಾಪ ಸೂಚನೆಯನ್ನು ಮಂಡಿಸಿದ್ದೀರಿ, ಅದಕ್ಕೆ ಸಂಪೂರ್ಣವಾದ ಬೆಂಬಲವನ್ನು ಸೂಚಿಸುತ್ತಾ, ಮುಖ್ಯವಾಗಿ ಸನ್ಮಾನ್ಯ ಕೈಲಾಸ್‌ರವರ ಬಗ್ಗೆ ಹೇಳಬೇಕೆಂದರೆ, ಸುಮಾರು 13 ರಿಂದ 14 ವರ್ಷಗಳ ಪರಿಚಯ ಸನ್ಮಾನ್ಯ ಕೈಲಾಸ್‌ರವರು ಮತ್ತು ನನಗೆ ಹಾಗೂ ನನ್ನ ಕುಟುಂಬ ವರ್ಗದವರೊಂದಿಗೆ ಪರಿಚಯವಿತ್ತು. ಅವರು ಒಂಟಿ ಜೀವನವನ್ನು ಸಾಗಿಸುತ್ತಾ, ಅವರು ಯಾವುದೇ ಪಕ್ಷದಲ್ಲಿ ಗುರುತಿಸಿಕೊಂಡಿದ್ದರು ಒಬ್ಬ ಪ್ರಾಮಾಣಿಕ ಹಾಗೂ

ನಿಷ್ಠಾವಂತ ಕಾರ್ಯಕರ್ತನಾಗಿ ಆ ಪಕ್ಷಕ್ಕೆ ಅವರ ಸೇವೆಯನ್ನು ಸಲ್ಲಿಸುತ್ತಾ ಹಲವಾರು ಸಂದರ್ಭಗಳಲ್ಲಿ ಅವರು ಅವಕಾಶಗಳಿಂದ ವಂಚಿತರಾಗಿರತಕ್ಕಂಥದ್ದು ನಮಗೆಲ್ಲರಿಗೂ ಗೊತ್ತಿರತಕ್ಕಂಥಹ ವಿಚಾರ. 1989ರಲ್ಲಿ ಪ್ರಥಮ ಬಾರಿಗೆ ವಿಧಾನ ಸಭೆ ಮಾಡತಕ್ಕಂತಹ ಒಂದು ಪ್ರಯತ್ನ ವಿಫಲವಾಯಿತು. 1994ರಲ್ಲಿ ಅವರು ಮತ್ತೊಮ್ಮೆ ಪ್ರಯತ್ನ ಮಾಡುವಂತಹ ಸಂದರ್ಭದಲ್ಲಿ ಅವರು ಬೇರೊಬ್ಬರಿಗೆ ಟಿಕೇಟ್ ಬಿಟ್ಟು ಕೊಡುವಂತಹ ಸಂದರ್ಭ ಒದಗಿಬಂದಿತು. ಈ ರೀತಿ ಹಲವಾರು ಸಂದರ್ಭದಲ್ಲಿ ಕೈಲಾಸ್‌ರವರು ಪಕ್ಷದ ಒಬ್ಬ ನಿಷ್ಠಾವಂತ ಕಾರ್ಯಕರ್ತರಾಗಿ ಸೇವೆಯನ್ನು ಸಲ್ಲಿಸಿಕೊಂಡು ಬಂದಿದ್ದಾರೆ. ಅವರು ಬಹಳ ಮೃದುವಾದ ಒಬ್ಬ ವ್ಯಕ್ತಿ. ಮುಖ್ಯವಾಗಿ ನಮ್ಮ ಕುಟುಂಬಕ್ಕೆ ಬಹಳ ಆತ್ಮೀಯವಾದ ವ್ಯಕ್ತಿಯಾಗಿ ಉಳಿದಿದ್ದರು. ಮೊನ್ನೆ ಸುಮಾರು ನಾಲ್ಕು ದಿವಸಗಳ ಹಿಂದೆ ಅವರನ್ನು ಭೇಟಿ ಮಾಡಿದಂತಹ ಸಂದರ್ಭದಲ್ಲಿ ಬಹಳ ಆತ್ಮವಿಶ್ವಾಸದಿಂದ ಖಂಡಿತವಾಗಿ ನಾನು ಗುಣ ಮುಖನಾಗಿ ಬರುತ್ತೇನೆ ಎನ್ನತಕ್ಕಂತಹ ಮಾತನ್ನು ನನ್ನ ಕುಟುಂಬದ ಸದಸ್ಯರ ಜೊತೆ ಹೋದಂತಹ ಸಂದರ್ಭದಲ್ಲಿ ಪ್ರತಿಯೊಬ್ಬರನ್ನು ಮಾತನಾಡಿಸಿ ಹೇಳಿದರು. ಅವರು ಇದ್ದಂತಹ ಪರಿಸ್ಥಿತಿ ನೋಡಿದಾಗ ಭಗವಂತ ಇಂತಹ ಒಳ್ಳೆಯ ವ್ಯಕ್ತಿಗಳಿಗೆ ಏಕೆ ಇಂತಹ ಕಷ್ಟದ ಪರಿಸ್ಥಿತಿಯನ್ನು ಒದಗಿಸುತ್ತಾನೆ ಎನ್ನತಕ್ಕಂತಹ ನೋವು ಆ ಸಂದರ್ಭದಲ್ಲಿ ನಮಗೆ ಕಾಡುತ್ತಿತ್ತು.

ಆದರೆ ದುರ್ದೈವ ಇವತ್ತು ಅವರು ನಮ್ಮನ್ನಗಲಿ ಹೋಗಿದ್ದಾರೆ, ಅವರ ಆತ್ಮಕ್ಕೆ ಶಾಂತಿ ಸಿಗಲಿ, ಅವರಲ್ಲಿ ಹೋರಾಟದ ಛಲ ಇತ್ತು, ಅದು ಬೇರೆಯವರಿಗೆ ಸ್ಫೂರ್ತಿಯಾಗಲೆಂದು ಹೇಳುತ್ತೇನೆ. ಇವತ್ತು ಯಾರು ನಮ್ಮನ್ನಗಲಿ ಹೋಗಿದ್ದಾರೆ. ಅವರ ಕುಟುಂಬಕ್ಕೆ ಅವರ ಅಗಲಿಕೆಯ ನೋವನ್ನು ಭರಿಸುವಂತಹ ಶಕ್ತಿ ಕೊಡಲಿ ಎಂದು ಹೇಳಿ ತಾವು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಒಂದೆರಡು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗ ಮೃತರಿಗೆ ಗೌರವ ಸೂಚಿಸುವ ಸಲುವಾಗಿ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಕಾಲ ಮೌನವನ್ನಾಚರಿಸ ಬೇಕೆಂದು ಕೋರುತ್ತೇನೆ.

(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

ಅಧ್ಯಕ್ಷರು : ಈ ಸದನವು ಅಂಗೀಕರಿಸಿದ ಸಂತಾಪ ಸೂಚನ ನಿರ್ಣಯದ ಪ್ರತಿಯನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡ ಲಾಗುವುದು.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೇ, ಈಗ ನೀವು ಸಭೆಯನ್ನು adjourn ಮಾಡುತ್ತಿದ್ದೀರಾ?

ಅಧ್ಯಕ್ಷರು : ಬಹುತೇಕ ಸದಸ್ಯರು ಹಾಗೂ ಮಂತ್ರಿಗಳು...

ಶ್ರೀ ಸಿದ್ದರಾಮಯ್ಯ : ಹೊಸ ಸಂಪ್ರದಾಯ ಏಕೆ ಮಾಡಿದಿರಿ? ಅವರ ಬಗ್ಗೆ ನನಗೂ ಗೌರವ ಇದೆ, It is different thing. He is a dedicated man, ಅವರು ನಮ್ಮ ಜೊತೆಯಲ್ಲಿದ್ದರು. ಹೊಸ ಸಂಪ್ರದಾಯ, ಹೊಸ ಪದ್ಧತಿಗಳು ಬೇಡ ಎಂದು ಹೇಳುತ್ತಿರುವುದು. We will go by your decision, it is different thing.

ಅಧ್ಯಕ್ಷರು : ನಾನು ಕಾರ್ಯದರ್ಶಿಯವರ ಹತ್ತಿರ ದಾಖಲೆ ತರಿಸಿ ನೋಡಿದೆ, ಹಿಂದೆ ಕೂಡ ಈ ರೀತಿ ಮಾಡಿದ್ದಾರೆ. ಈ ಸದನದ ಬಹುತೇಕ ಮಾನ್ಯ ಸದಸ್ಯರುಗಳು ಶ್ರೀ ಕೈಲಾಸ್ ಅವರ ಅಂತ್ಯಕ್ರಿಯೆಯಲ್ಲಿ ಭಾಗವಹಿಸಲು ಇಚ್ಛೆ ವ್ಯಕ್ತಪಡಿಸಿದ್ದರಿಂದ ಮತ್ತು ಅಂತ್ಯಕ್ರಿಯೆಯು ಬೆಂಗಳೂರಿನಲ್ಲಿ ನಡೆಯುವುದರಿಂದ ಮಾನ್ಯ ಸದಸ್ಯರೆಲ್ಲರೂ ಭಾಗವಹಿಸಲು ಅನುಕೂಲವಾ ಗುವಂತೆ ಸದನವನ್ನು ಮತ್ತೆ ನಾಳೆ ಬೆಳಿಗ್ಗೆ 10.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನದ ಕಲಾಪವು ಮಧ್ಯಾಹ್ನ 12.00 ಗಂಟೆ 23 ನಿಮಿಷಕ್ಕೆ ಮುಕ್ತಾಯಗೊಂಡು ಮತ್ತೆ ದಿನಾಂಕ: 30.12.2009ರಂದು ಬೆಳಿಗ್ಗೆ 10.00 ಗಂಟೆಗೆ ಸಮಾವೇಶಗೊಳ್ಳಲು ನಿಃಶ್ಚಯಿಸಿತು.)

* * *